


ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್
ವಿಶ್ವ ಸುದ್ದಿಪತ್ರಿಕೆ
ಹೊಸ ಯೆರೂಸಲೇಮ್ ವಿಶ್ವದಾದ್ಯಂತದ ಚರ್ಚ್ ಗಳು
ಪ್ಯಾಸ್ಟರ್ ಟೋನಿ ಅಲಾಮೊ ಅಲಾಮೊ ಕ್ರೈಸ್ತಮತೀಯ ರಾಷ್ಟ್ರ ಸಂಪುಟ 19700

# ಸಂಪೂರ್ಣ ವಿಶ್ವದಲ್ಲಿ ಅತ್ಯಂತ ಪ್ರಭಾವಿ ಸ್ಥಾನ

**ಟೋನಿ ಅಲಾಮೊ ಅವರಿಂದ**

ಕ್ಯಾಲಿಫೋರ್ನಿಯದ ಸಾಗಸ್(ಈಗ ಕ್ಯಾನ್ಯನ್ ಕಂಟ್ರಿ ಎಂದು ಕರೆಯಲ್ಪಡುತ್ತದೆ)ನಲ್ಲಿ ಒಂದು ರಾತ್ರಿಯ ಕುರಿತು ದೇವರು ನನಗೆ ನೀಡಿದ ಒಂದು ಸಾಕ್ಷ್ಯಕ್ಕೆ ನಾನು ಸಾಕ್ಷಿಯಾಗಿದ್ದೇನೆ. ನಮ್ಮ ಪ್ರಭು ಮತ್ತು ರಕ್ಷಕರಾದ ಪ್ರಭು ಯೇಸು ಕ್ರಿಸ್ತರ ಸಾಕ್ಷ್ಯಕ್ಕೆ ಹೋಲಿಸಿದರೆ, ನನ್ನ ಸಾಕ್ಷ್ಯ, ನನ್ನ ಸಾಕ್ಷಿ ಎಷ್ಟು ಕನಿಷ್ಠವಾಗಿದೆ ಎಂದು ಲೋಕಕ್ಕೆ ಹೇಳುವ ಉದ್ದೇಶದಿಂದ ದೇವರು ಆ ರಾತ್ರಿ ನನಗೆ ನೀಡಿದ ಸಂದೇಶದ ಒಂದು ಚಿಕ್ಕ ಭಾಗವನ್ನು ನಾನು ಪುನಃ ಬರೆಯುತ್ತಿದ್ದೇನೆ.

ಇಬ್ರಿಯರಿಗೆ ಬರೆದ ಪತ್ರದ ಹನ್ನೊಂದನೇ ಅಧ್ಯಾಯ ಕ್ರಿಸ್ತರ ದೇಹದ ಮಾಜಿ ಹಿರಿಯರ ಸಾಕ್ಷ್ಯವನ್ನು ತೋರಿಸುತ್ತದೆ, ಆದರೆ ಆ ಸಾಕ್ಷ್ಯಗಳು ಕೂಡ ಕ್ರಿಸ್ತರ ಸಾಕ್ಷ್ಯಕ್ಕೆ ಹೋಲಿಕೆಯಾಗುವುದಿಲ್ಲ. ನಾನು ಇಬ್ರಿಯರಿಗೆ ಬರೆದ ಪತ್ರದ ಹನ್ನೊಂದನೇ ಮತ್ತು ಹನ್ನೆರಡನೇ ಅಧ್ಯಾಯಗಳನ್ನು ವಿಸ್ತಾರವಾಗಿ ವಿವರಿಸುತ್ತೇನೆ, ಆದರೆ ಮೊದಲು, ಲಾಸ್ ಏಂಜಲೀಸ್ ಕೌಂಟಿಯಲ್ಲಿ ಕ್ಯಾನ್ಯನ್ ಕಂಟ್ರಿ ಪ್ರದೇಶದಲ್ಲಿ ಉಪದೇಶ ಮಾಡುವುದಕ್ಕಾಗಿ ಪ್ರಭುವು ನನಗೆ ನೀಡಿರುವ ಚರ್ಚಿನ ಬಲಬದಿಯಲ್ಲಿ ನಿಂತಿದ್ದ ಒಂದು ಬೃಹತ್ ಓಕ್ ಮರದ ಬಗ್ಗೆ ನನ್ನ ಸ್ವಲ್ಪ ಮೆಚ್ಚುಗೆಯನ್ನು ನಾನು ಪುನಃ ವ್ಯಕ್ತಪಡಿಸುತ್ತೇನೆ.

ಆ ರಾತ್ರಿ, ಚರ್ಚ್ ಜನರಿಂದ ತುಂಬಿತ್ತು, ಮತ್ತು ಹವೆ ಎಷ್ಟು ಚೆನ್ನಾಗಿತ್ತೆಂದರೆ, ನಾನು ಚರ್ಚಿನ ಹೊರಗೆ ಅದರ ಕಾಂಕ್ರೀಟ್ ಮುಖಮಂಟಪದಲ್ಲಿ ನಿಂತು, ಆ ಮರವನ್ನು ಮೆಚ್ಚಿಕೊಳ್ಳುತ್ತಾ, ಪ್ರಶಾಂತವಾದ, ತಣ್ಣನೆಯ ಹವೆಯನ್ನು ಆನಂದಿಸುತ್ತಿದ್ದೆ.

ನಾನು ಪ್ರಭುವಿಗೆ, “ಪ್ರಭುವೇ, ನನ್ನನ್ನು ಆ ಓಕ್ ಮರದಷ್ಟು ಬಲಿಷ್ಠನನ್ನಾಗಿ ಮಾಡು” ಎಂದು ಹೇಳಿದೆನು. ಪ್ರಭುವು ನನಗೆ ಎಷ್ಟು ಬೇಗ ಉತ್ತರಿಸಿದರು ಎಂಬುದರ ಬಗ್ಗೆ ನಾನು ಆಶ್ಚರ್ಯಪಟ್ಟೆನು, ಮತ್ತು ಆತ ಹೇಳಿದ್ದನ್ನು ಕೇಳಿ ಬಹಳ ಆಶ್ಚರ್ಯಪಟ್ಟೆನು. “ನೀನು ಆ ಓಕ್ ಮರಕ್ಕಿಂತ ನೂರು ದಶಲಕ್ಷಪಟ್ಟು ಬಲಿಷ್ಠನಾಗಬೇಕು” ಎಂದು ಆತ ಹೇಳಿದರು. ನಾನು ನಿಜವಾಗಿ ಕೆಲಕಾಲ ನಂಬಲಿಲ್ಲ, ಏಕೆಂದರೆ ಆ ಮರ ಬಹಳ ದೊಡ್ಡದಾಗಿತ್ತು ಮತ್ತು ನೋಡಲು ಬಹಳ ಬಲಿಷ್ಠವಾಗಿತ್ತು. ನಮ್ಮ ಜನರಲ್ಲಿ ಹಲವರು ಅದರ ರೆಂಬೆ-ಕೊಂಬೆಗಳ ಮೇಲೆ ಕುಳಿತುಕೊಂಡಿದ್ದ ಫೋಟೊಗಳನ್ನು ತೆಗೆದು, ಕ್ಯಾಲಿಫೋರ್ನಿಯದ ಹಾಲಿವುಡ್ಡಿನ ವೈನ್ ಸ್ಟ್ರೀಟಿನಲ್ಲಿರುವ ಕ್ಯಾಪಿಟಲ್ ಟವರ್ ನ ಕ್ಯಾಪಿಟಲ್ ರೆಕಾರ್ಡುಗಳಲ್ಲಿ ರೆಕಾರ್ಡ್ ಮಾಡಲಾದ ನಮ್ಮ ಸಂಗೀತದ ಮತ್ತು ಹಾಡಿನ ಆಲ್ಬಂಗಳಲ್ಲಿ ಒಂದರ ಮುಖಪುಟದಲ್ಲಿ ಆ ಫೋಟೊವನ್ನು ಹಾಕಿದ್ದೆವು.

ಅದು ನನಗೆ ತಮಾಷೆ ಎನಿಸಿತು, ಸ್ವಲ್ಪ ನಕ್ಕು, ಚರ್ಚ್ ಒಳಗೆ ಹೋಗಿ, ವೇದಿಕೆಯನ್ನೇರಿ, ಪೀಠದ ಹಿಂದೆ ಹೋದೆ. ಮುಗುಳ್ನಗುತ್ತ ಚರ್ಚಿನಲ್ಲಿದ್ದ ಜನರಿಗೆ, ಪ್ರಭುವು ನನಗೆ ಆಗಷ್ಟೆ ಹೇಳಿದ್ದನ್ನು ಹೇಳಿದೆ, ಮತ್ತು ಅದು ತಮಾಷೆ ಎಂಬಂತೆ ಎಲ್ಲರೂ ನಗಾಡಲು ಪ್ರಾರಂಭಿಸಿದರು. ಅವರು ನಗಾಡುವುದನ್ನು ನಿಲ್ಲಿಸುವುದಕ್ಕಿಂತ ಮುಂಚೆ, ಕಟ್ಟಡದ ಹೊರಗೆ, ಸಂಪೂರ್ಣ ಚರ್ಚ್ಅನ್ನು ಮತ್ತು ಅದರಲ್ಲಿದ್ದವರನ್ನು ನಡುಗಿಸಿದ ದಢಾರ್ ಸದ್ದು ಕೇಳಿಸಿತು. “ಅದು ಆ ಮರವಾದರೆ ಹೇಗಿರುತ್ತದೆ?” ಎಂದು ನಾನು ಹೇಳುತ್ತಿದ್ದಂತೆಯೇ ಕೆಲವು ಸದಸ್ಯರು ಹೊರಗೆ ನೋಡಲು ಕಿಟಕಿಗಳ ಬಳಿ ಓಡಿದರು. ಕಿಟಕಿಗಳಿಂದ ಹೊರಗೆ ನೋಡುತ್ತಿದ್ದ ಸಹೋದರರು ಬೇಗನೆ ನನ್ನನ್ನು ನೋಡಿ, “ಅದು ಆ ಮರವೇ, ವಾಹನ ನಿಲ್ದಾಣದಲ್ಲಿ ನೆಲದ ಮೇಲೆ ಬಿದ್ದಿದೆ, ಮತ್ತು ಅದರ ಬೇರುಗಳು ಗಾಳಿಯಲ್ಲಿವೆ” ಎಂದು ಹೇಳಿದರು. ಆ ಸಮಯದಲ್ಲಿ, ಸ್ವರ್ಗವನ್ನು ಪ್ರವೇಶಿಸುವ ಯಾರೇ ಆಗಲಿ, ಯಾವುದೇ ದೈಹಿಕ ಅಥವಾ ಲೌಕಿಕ ವಸ್ತುವಿಗಿಂತ ನೂರು ದಶಲಕ್ಷಪಟ್ಟಿಗಿಂತ ಬಲಿಷ್ಠವಾಗಿರಬೇಕು. ಏಕೆಂದರೆ ಪವಿತ್ರಾತ್ಮನ ಶಕ್ತಿಯಲ್ಲಿರುವುದು, ಕ್ರಿಸ್ತರಲ್ಲಿರುವುದು ಸಂಪೂರ್ಣ ವಿಶ್ವದಲ್ಲಿ ಅತ್ಯಂತ ಮಹತ್ವದ ಸ್ಥಾನ ಎಂದು ನನಗೂ ಮತ್ತು ಚರ್ಚ್ ನಲ್ಲಿದ್ದ ಎಲ್ಲರಿಗೂ ಅರಿವಾಗಲಿಲ್ಲ. ಆದ್ದರಿಂದ ದೇವರು ಆ ಮರವನ್ನು ಸಂಪೂರ್ಣ ಲೋಕದ, ಮತ್ತು ಅದರ ಎಲ್ಲಾ ಶಕ್ತಿಗಳ ದ್ಯೋತಕವನ್ನಾಗಿಸಿದರು. ಪವಿತ್ರಾತ್ಮನ ಮೂಲಕ ಯೇಸುವನ್ನು ಬಿಟ್ಟರೆ ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಲು ಸಂಪೂರ್ಣ ವಿಶ್ವದಲ್ಲಿ ಯಾವುದಕ್ಕೂ ಸಾಧ್ಯವಿಲ್ಲ. (ಯೋಹಾನ 10:9, 14:6, ಅಪೊಸ್ತಲರ ಕೃತ್ಯಗಳು 4:12).

ನಮ್ಮ ಮದುವೆ ಸಂಪೂರ್ಣವಾಗಿ ಪ್ರಭುವಿನ ಇಚ್ಛೆ ಎಂದು ನನ್ನ ಹೆಂಡತಿ ಸೂ ಮತ್ತು ನನಗೆ ತಿಳಿದಿತ್ತು ಏಕೆಂದರೆ ನಾವು ಮದುವೆಯಾಗಿದ್ದೇವೆಂದು ನಮಗಿಬ್ಬರಿಗೂ ಬಹಳ ಸ್ಪಷ್ಟವಾದ ದರ್ಶನಗಳಾಗಿದ್ದವು. ಈ ದರ್ಶನಗಳು ಅತ್ಯಂತ ಅಲೌಕಿಕವಾಗಿದ್ದವು, ಮತ್ತು ಜೀವಂತ ಬಣ್ಣಗಳಲ್ಲಿದ್ದವು. ಸೂಸಿ ನಮ್ಮ ದರ್ಶನಗಳಿಗಿಂತ 25 ವರ್ಷಗಳ ಮೊದಲು ರಕ್ಷಣೆ ಹೊಂದಿದ್ದಳು, ಮತ್ತು ನಾನು ಕೆಲವೇ ತಿಂಗಳುಗಳ ಹಿಂದೆ ರಕ್ಷಣೆ ಹೊಂದಿದ್ದೆನು. ನನಗೆ 30 ವರ್ಷ ವಯಸ್ಸಾಗಿತ್ತು, ಮತ್ತು ಸೂ ಗೆ 39 ವರ್ಷ ವಯಸ್ಸಾಗಿತ್ತು. ನನಗೆ ದರ್ಶನವಾದ ಬೆಳಗ್ಗೆ, ಮತ್ತು ನನಗೆ ದರ್ಶನವಾಗುವುದಕ್ಕಿಂತ ಸ್ವಲ್ಪ ಮೊದಲು,

*(ಪುಟ 2ರಲ್ಲಿ ಮುಂದುವರಿದಿದೆ)*



*ಇದು ಈ ಲೇಖನದಲ್ಲಿ ಉಲ್ಲೇಖಿಸಿರುವ ದೊಡ್ಡ ಮರ ಮತ್ತು ಇವರು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ಪ್ರಭುವಿಗಾಗಿ ಗೆದ್ದಿರುವ ದಶಲಕ್ಷಗಟ್ಟಲೆ ಆತ್ಮಗಳ ಪೈಕಿ ಕೇವಲ ಕೆಲವರು.*

## ಸಂಪೂರ್ಣ ವಿಶ್ವದಲ್ಲಿ ಅತ್ಯಂತ ಪ್ರಭಾವಿ ಸ್ಥಾನ ಟೋನಿ ಅಲಾಮೊ ಅವರಿಂದ

*(ಪುಟ 1 ರಿಂದ ಮುಂದುವರಿದಿದೆ)*

ಕೆಲವು ಬೈಬಲ್ ವಿದ್ಯಾರ್ಥಿಗಳು ಕೋಣೆಯಲ್ಲಿದ್ದಾಗ ನಾನು ಲಿವಿಂಗ್-ರೂಂನಲ್ಲಿ ಗಾಢ ನಿದ್ರೆಯಲ್ಲಿದ್ದೆನು. ಸ್ವಪ್ನ-ದರ್ಶನದಲ್ಲಿ, ನಾನು, ಲಿವಿಂಗ್ ರೂಂ ಒಳಗೆ ನಡೆದು ಬಂದು, ಮೊಣಕಾಲೂರಿ ಸೂ ಗೆ ತುಟಿಯ ಮೇಲೆ ಮುತ್ತಿಡುವುದನ್ನು ನೋಡಿದೆನು. ಆಕೆ ನನ್ನ ಬೈಬಲ್ ಬೋಧಕಿಯಾಗಿದ್ದರು. ನನಗೆ ದುಷ್ಟ ಸ್ವಪ್ನವಾಗುತ್ತಿದೆ ಎಂದು ಅಂದುಕೊಂಡು, ಮೇಲೇಳಲು ಪ್ರಾರಂಭಿಸಿದೆ (ನಾನು ನನ್ನ ಮುಖದ ಮೇಲೆ ಮಲಗಿದ್ದೆ) ಮತ್ತು "ದೇವರೇ, ಇಲ್ಲ! ಆಕೆ ನನ್ನ ಬೈಬಲ್ ಬೋಧಕಿ!" ಎಂದು ಕೂಗಾಡಿದೆ. ಸ್ವರ್ಗದಿಂದ ಎರಡು ಚಿನ್ನದ ನಳಿಕೆಗಳು ನನ್ನ ಎದೆಯೊಳಗೆ ಇಳಿಯುವುದನ್ನು, ಮತ್ತು ನನ್ನ ಧ್ವನಿಯು ಬಲಬದಿಯ ನಳಿಕೆಯ ಮೂಲಕ ಮೇಲಕ್ಕೆ ಹೋಗುತ್ತಾ, "ಇಲ್ಲ, ಪ್ರಭು! ಆಕೆ ನನಗಿಂತ ಹೆಚ್ಚು ಸಮಯ ರಕ್ಷಣೆ ಹೊಂದಿದ್ದಾರೆ, ಮತ್ತು ಆಕೆ ನನಗಿಂತ ಹೆಚ್ಚು ತಿಳಿದುಕೊಂಡಿದ್ದಾರೆ; ಆಕೆ ನನಗಿಂತ ಹೆಚ್ಚು ಬುದ್ಧಿವಂತೆ" ಎಂದು ಹೇಳುವುದನ್ನು ನೋಡಿದೆನು. ಮತ್ತು ಪ್ರಭುವು ಸ್ವರ್ಗದಿಂದ ಬಂದ ಮತ್ತೊಂದು ನಳಿಕೆಯಿಂದ, "ಅದು ನಿನ್ನ ಅಹಂಕಾರಕ್ಕೆ ಒಳ್ಳೆಯದು" ಎಂದು ಉತ್ತರಿಸಿದರು.

ನಾನು ದೇವರನ್ನು ಎಷ್ಟು ಪ್ರಶ್ನೆಗಳನ್ನು ಕೇಳಲಾರಂಭಿಸಿದೆನೆಂದರೆ, ಅವು ನನ್ನಿಂದ ಮಷೀನ್ ಗನ್ನಿನಿಂದ ಹೊರಬರುವ ಗುಂಡುಗಳಂತೆ ಹೊರಬಂದು, ನಳಿಕೆಯ ಮೂಲಕ ಬಲಬದಿಯಲ್ಲಿ ದೇವರ ಬಳಿ ಹೋಗುತ್ತಿದ್ದವು. ದೇವರಿಂದ ಉತ್ತರಗಳು ಎಷ್ಟು ಬೇಗನೆ ಕೆಳಗೆ ಬರಲಾರಂಭಿಸಿದವೆಂದರೆ, ಬೆಂಕಿ ನಂದಿಸುವ ನೀರ್ಕೊಳವೆಯಿಂದ ಉತ್ತರಗಳು ಬಂದಂತಿತ್ತು, ನನ್ನನ್ನು ಭವಿಷ್ಯದಿಂದ ತುಂಬುತ್ತಿರುವಂತಿತ್ತು.

ಅದಾದ ನಂತರ ಸ್ವಲ್ಪವೇ ಸಮಯದಲ್ಲಿ, ಸೂಸಿಗೆ ಸ್ತನದ ಕ್ಯಾನ್ಸರ್ ಉಂಟಾಯಿತು. ನಾನು ಬೀದಿಗೆ (ಹಾಲಿವುಡ್ ಬೂಲೆವಾರ್ಡ್) ಹೋಗಿ, ಸುವಾರ್ತೆಯನ್ನು ಕೇಳಲು ಬರುವಂತೆ ಜನರನ್ನು ಒತ್ತಾಯಿಸುತ್ತಿದ್ದೆ. ಸೂಸಿ ಅವರಿಗೆ ಸುವಾರ್ತೆ ಬೋಧಿಸುವುದಕ್ಕಿಂತ ಮುನ್ನ, ದೇವರು ನನ್ನನ್ನು ಬೆವರ್ಲಿ ಹಿಲ್ಸ್ ನ ಒಬ್ಬ ವಕೀಲರ ಕಚೇರಿಯಲ್ಲಿ, ಅದೂ ಬಹಳ ಅಲೌಕಿಕ ರೀತಿಯಲ್ಲಿ ಹೇಗೆ ಸಂಪರ್ಕಿಸಿದರು ಎಂದು ನಾನು ಅವರಿಗೆ ಹೇಳುತ್ತಿದ್ದೆ.

ದೇವರು ನಮ್ಮಿಬ್ಬರನ್ನು ಪರಸ್ಪರರಿಗೆ ಕೊಡುವ ಮೊದಲು, ನಾನು ಸ್ವರ್ಗ ಮತ್ತು ನರಕದ ದರ್ಶನಗಳನ್ನು ನೋಡಿದ್ದೆನು, ಮತ್ತು ಅನೇಕರು ನರಕಕ್ಕೆ ಹೋಗುವುದನ್ನು ನೋಡಿದ್ದೆನು. ಸೂಸಿ ಇನ್ನೂ ಚಿಕ್ಕ ಹುಡುಗಿಯಾಗಿದ್ದಾಗ ಆಕೆ ಕೂಡ ಪ್ರಭುವಿನಿಂದ ಸ್ವರ್ಗ ಮತ್ತು ನರಕದ ದರ್ಶನಗಳನ್ನು ಪಡೆದಿದ್ದರು. ಆಕೆ ಒಂಬತ್ತು ವರ್ಷದವರಾಗಿದ್ದಾಗ, ಪ್ರಭುವಿನ ಕೈಯಿಂದ ಕ್ಷಯರೋಗದಿಂದ ಗುಣಮುಖರಾದರು. ನಾವು ಮಿನಿಸ್ಟ್ರಿಯಲ್ಲಿದ್ದ ಹದಿನೇಳು ವರ್ಷಗಳ ನಂತರ, ಪ್ರಭುವಿನೊಂದಿಗಿರಲು ಹೋದರು. ಆದರೆ ಆಕೆ ಹೋಗುವ ಮೊದಲು, ನೀವು ಊಹಿಸಬಲ್ಲುದಕ್ಕಿಂತ ಹೆಚ್ಚಿನ ಅತ್ಯಂತ ಕೆಟ್ಟ ಸುಳ್ಳು ಆಪಾದನೆಗಳನ್ನು ಹದಿನೇಳು ವರ್ಷಗಳ ವರೆಗೆ ಸಹಿಸಿದೆವು. ನಾವು ಪ್ರಭುವಿಗಾಗಿ ಸಹಸ್ರಾರು ಆತ್ಮಗಳನ್ನು ಗೆಲ್ಲುತ್ತಿದ್ದೆವು, ಮತ್ತು ಹಲವು ಸಂದರ್ಭಗಳಲ್ಲಿ ನಮ್ಮನ್ನು ಜೈಲಿಗೆ ಕಳುಹಿಸಲಾಯಿತು. ನಾವು ಪ್ರಭುವಿಗಾಗಿ ಗೆದ್ದ ಅನೇಕರು, ಬೈಬಲ್ ನಲ್ಲಿನ ಹಲವಾರು ವಾಕ್ಯಗಳಲ್ಲಿ ಹೇಳಿರುವಂತೆ, ಅವುಗಳಲ್ಲಿ ಒಂದು 2 ಥೆಸಲೋನಿಕದವರಿಗೆ 2:3 ರಲ್ಲಿರುವಂತೆ, ಪ್ರಭುವಿನಿಂದ ದೂರವಾಗಿದ್ದರು.

ಸೂ ನ ಮರಣದ ನಂತರ ಕೂಡಲೆ ಲೇಬರ್ ವಿಭಾಗವು ನನ್ನನ್ನು ಅರ್ಕಾನ್ಸಾ ದ ಲಿಟ್ಲ್ ರಾಕ್‌ನಲ್ಲಿರುವ ನ್ಯಾಯಾಲಯಕ್ಕೆ ಕರೆದುಕೊಂಡು ಹೋಯಿತು. ಸೂಸಿಯ ಮರಣಕ್ಕೆ ಶೋಕಿಸಲೂ ನನಗೆ ಸಮಯವಿರಲಿಲ್ಲ, ಮತ್ತು ಪ್ರಭುವನ್ನು ಬಿಟ್ಟರೆ ಈ ಭೂಮಿಯ ಮೇಲೆ ಬೇರೆ ಎಲ್ಲರಿಗಿಂತ ಹೆಚ್ಚಾಗಿ ಆಕೆಯನ್ನು ಪ್ರೀತಿಸುತ್ತಿದ್ದೆ. ಆಕೆ ನನ್ನ ಪರಿಪೂರ್ಣ ಅನುರೂಪ ಸಂಗಾತಿಯಾಗಿದ್ದಳು, ಬಹಳ ಬುದ್ಧಿವಂತೆ ಮತ್ತು ಬಹಳ ಧರ್ಮನಿಷ್ಠೆ. ನನ್ನ ಹೃದಯ ನುಚ್ಚುನೂರಾಗಿತ್ತು, ಈಗಲೂ ಹಾಗೇ ಇದೆ.

ಆ ಸಮಯದಲ್ಲಿ ಲೇಬರ್ ವಿಭಾಗದ ಮುಖ್ಯಸ್ಥರಾಗಿದ್ದ ರೇಮಂಡ್ ಜೆ. ಡಾನೊವನ್, ನಾವು ಪ್ರಭುಗಳತ್ತ ಗೆದ್ದ ಎಲ್ಲಾ ಜನರಿಗೆ ಸಂಬಳದ ಚೆಕ್‌ಗಳನ್ನು ಬರೆಯಲು ನನ್ನನ್ನು ಒತ್ತಾಯ ಪಡಿಸಲು ಪ್ರಯತ್ನಿಸುತ್ತಿದ್ದರು. ಅವರು ಹೆಚ್ಚಾಗಿ ಮಾಜಿ ಹಿಪ್ಪಿಗಳು ಮತ್ತು ಮಾದಕ ದ್ರವ್ಯ ವ್ಯಸನಿಗಳಾಗಿದ್ದರು, ಹಲವಾರು ವಿಧದ ಅಪರಾಧಗಳಿಂದ ರಕ್ಷಣೆಯತ್ತ ನಾವು ಕರೆದುಕೊಂಡು ಹೋಗಿದ್ದ ಜನರಾಗಿದ್ದರು. ನಾವು ಅವರಿಗಾಗಿ ಮನೆಗಳನ್ನು ಕಟ್ಟಿದ್ದೆವು, ಚರ್ಚುಗಳನ್ನು, ಶಾಲೆಗಳನ್ನು, ಕ್ಯಾಫಿಟೇರಿಯ, ಮತ್ತು ಅಪಾರ್ಟ್ ಮೆಂಟ್ ಮನೆಗಳನ್ನು ಕಟ್ಟಿದ್ದೆವು. ನಾವು ಅವರಿಗೆ ಪೀಠೋಪಕರಣಗಳನ್ನು ನೀಡಿದ್ದೆವು, ಮತ್ತು ಅವರ ಯುಟಿಲಿಟಿಗಳಿಗಾಗಿ ಹಣ ಕಟ್ಟುತ್ತಿದ್ದೆವು. ಮಾತ್ರವಲ್ಲದೆ ಅವರ ಎಲ್ಲಾ ಕಾಯಿಲೆಗಳಿಗೆ ಮತ್ತು ಅವರ ಮಕ್ಕಳ ಹೆರಿಗೆಗೆ ವೈದ್ಯಕೀಯ ಬಿಲ್‌ಗಳನ್ನು ಪಾವತಿಸುತ್ತಿದ್ದೆವು.

ಹನ್ನೆರಡು ರಾಜ್ಯಗಳ ಪ್ರದೇಶದಲ್ಲೇ ಅತ್ಯುತ್ತಮ ರೆಸ್ಟೋರೆಂಟಿನಿಂದ ನಾವು ಆಹಾರ ಒದಗಿಸಿದೆವು ಮತ್ತು ಲೋಕದಲ್ಲೇ ಅತ್ಯುತ್ತಮ ಅಂಗಡಿಯಿಂದ ಬಟ್ಟೆ ಒದಗಿಸಿದೆವು. ಈ ಅಂಗಡಿಯು ಉತ್ತಮ ಚಲನಚಿತ್ರ ತಾರೆಯರಿಗೆ ಮತ್ತು ಎಲ್ಲಾ ವಿಧವಾದ ಮನೋರಂಜನೆಗಾರರಿಗೆ ಉಡುಪುಗಳನ್ನು ಒದಗಿಸುತ್ತಿತ್ತು. ಇದು *ಡಲ್ಲಾಸ್* ಎಂಬ ಟಿವಿ ಕಾರ್ಯಕ್ರಮಕ್ಕೆ ಮತ್ತು *ಅರ್ಬನ್ ಕೌಬಾಯ್‌*ನಂತಹ ಹಲವಾರು ಚಲನಚಿತ್ರಗಳಿಗೆ ಉಡುಪುಗಳನ್ನು ಒದಗಿಸಿತ್ತು. ಅವರು ಲೂಸಿಲ್ಲೆ ಬಾಲ್, ಶ್ರೀಮತಿ ಡಗ್ಲಸ್ ಮಕಾರ್ತರ್, ಲ್ಯಾರಿ ಹ್ಯಾಗ್ಮನ್, ಎಲ್ವಿಸ್ ಪ್ರೆಸ್ಲಿ, ಪೋರ್ಟರ್ ವ್ಯಾಗನರ್, ಹ್ಯಾಂಕ್ ಸ್ನೋ, ರಾನಿ ಮಿಲ್ಸಾಪ್, ಮಿ. ಟಿ, ಹಲ್ಕ್ ಹೋಗನ್, ಸೊನ್ನಿ ಮತ್ತು ಮೇರಿ ಬೋನೊ, ಬೀಟಲ್ಸ್, ಮೆಲ್ ಟಿಲ್ಲಿಸ್, ಜಾರ್ಜ್ ಜೋನ್ಸ್, ಜ್ಯಾಕ್ವೆಲಿನ್ ಕೆನೆಡಿ ಒನಾಸಿಸ್, ಬ್ರುಕ್ ಷೀಲ್ಡ್ಸ್, ಬೋನೊ, ರಾಡ್ ಸ್ಟೆಗರ್, ಮತ್ತು ಲೆಕ್ಕಿಸಲು ಅಸಾಧ್ಯವಾದ ಸಹಸ್ರಾರು ಇತರರಿಗೆ ಉಡುಪುಗಳನ್ನು ಒದಗಿಸಿದ್ದರು. ನಮ್ಮ ಚರ್ಚಿನ ಸದಸ್ಯರಿಗೆ, ಹೆಚ್ಚಾಗಿ ಮಾಜಿ ಹಿಪ್ಪಿಗಳಿಗೆ ಇದೇ ಅಮೋಘವಾದ ಅಂಗಡಿಯಿಂದ ಉಡುಪುಗಳನ್ನು ಒದಗಿಸಲಾಗುತ್ತಿತ್ತು, ಇದನ್ನೆ ಐಆರ್‌ಎಸ್, ಸುಳ್ಳು ಆಪಾದನೆಗಳ ಆಧಾರದ ಮೇಲೆ ಮುಚ್ಚಿತು.

ತೆರಿಗೆ ವಂಚನೆಗಾಗಿ ನನ್ನನ್ನು ಆರು ವರ್ಷಗಳ ಕಾಲ ಜೈಲಿಗೆ ಕಳುಹಿಸಲಾಯಿತು; ಆದಾಗ್ಯೂ, ನಮಗೆ ತೆರಿಗೆ ವಿನಾಯಿತಿ ಇತ್ತು, ಏಕೆಂದರೆ ಅಂಗಡಿ ಮತ್ತು ರೆಸ್ಟೋರೆಂಟ್ ಎರಡರಿಂದಲೂ ಬಂದ ಆದಾಯವನ್ನು ಲೋಕದಾದ್ಯಂತ ಸುವಾರ್ತೆಯನ್ನು ಪಸರಿಸುವುದಕ್ಕಾಗಿ ಮತ್ತು ಮಾದಕ ದ್ರವ್ಯಗಳನ್ನು ಸೇವಿಸುವುದರಿಂದ ರಕ್ಷಿತರಾದ ಮತ್ತು ಎಲ್ಲಾ ರೀತಿಯ ಅಪರಾಧಗಳ ಬದುಕಿನಿಂದ ರಕ್ಷಿತರಾದ ಚರ್ಚಿನಲ್ಲಿದ್ದ ಜನರಿಗಾಗಿ ಬಳಸಲಾಗುತ್ತಿತ್ತು. ನಮಗೆ 501(c)(3) ತೆರಿಗೆ ವಿನಾಯಿತಿ ಇತ್ತು. ಬಟ್ಟೆ ಅಂಗಡಿ, ರೆಸ್ಟೋರೆಂಟ್, ತೋಟ, ಮತ್ತು ಗ್ಯಾಸ್ ಸ್ಟೇಷನ್‌ಗಳಿಂದ ಬಂದ ಆದಾಯದಿಂದ ನಾವು ಹಲವಾರು ವರ್ಷಗಳಿಂದ ನಡೆಸುತ್ತಿದ್ದ ಸುವಾರ್ತಾ ಟಿವಿ ಮತ್ತು ರೇಡಿಯೊ ಕಾರ್ಯಕ್ರಮಗಳಿಗೂ ಹಣ ಕಟ್ಟುತ್ತಿದ್ದೆವು.

ಹರ್ಬ್ ಎಲಿಂಗ್‌ವುಡ್, ರೊನಾಲ್ಡ್ ರೀಗನ್ ಅವರಿಗೆ ವಕೀಲರಾಗಿದ್ದರು. ಲಾಸ್ ಏಂಜಲೀಸ್ ನಲ್ಲಿ ಮಾದಕ ದ್ರವ್ಯ ಸಮಸ್ಯೆಯ ಬಹುಭಾಗವನ್ನು ಪರಿಹರಿಸಿದಕ್ಕಾಗಿ, ಮತ್ತು ವಾಟ್ಸ್ ದಂಗೆಗಳ ಸಮಯದಲ್ಲಿ ಲಾಸ್ ಏಂಜಲೀಸ್ ನಗರವು ಬೆಂಕಿಗೆ ಆಹುತಿಯಾಗುವುದನ್ನು ತಡೆಗಟ್ಟುವಲ್ಲಿ ನಮ್ಮ ನೆರವಿಗಾಗಿ ನಮಗೆ ಮೆಚ್ಚುಗೆ ಸೂಚಿಸಲು ಗವರ್ನರ್ ರೀಗನ್ ಅವರಿಂದ ಶ್ರೀ ಎಲಿಂಗ್‌ವುಡ್ ನಮ್ಮ ಚರ್ಚಿಗೆ ಕಳುಹಿಸಲ್ಪಟ್ಟಿದ್ದರು. ಗವರ್ನರ್ ರೀಗನ್ ಅಧ್ಯಕ್ಷರಾದಾಗ, ಶ್ರೀ ಎಲಿಂಗ್‌ವುಡ್ ಆಗಲೂ ಅವರ ವಕೀಲರಾಗಿದ್ದರು. ನಾವು ಈ ಎಲ್ಲಾ ಮಾಜಿ ಹಿಪ್ಪಿಗಳಿಗೆ ಒದಗಿಸುತ್ತಿದ್ದ ಎಲ್ಲದರ ಹೊರತಾಗಿ ಅವರಿಗೆ ಸಂಬಳವನ್ನು ನೀಡಬೇಕೆಂದು ಲೇಬರ್ ವಿಭಾಗ ನಮ್ಮಿಂದ ನಿರೀಕ್ಷಿಸುತ್ತಿದೆ ಎಂದು ನಾನು ಶ್ರೀ ಎಲಿಂಗ್‌ವುಡ್ ಅವರಿಗೆ ಹೇಳಿದೆ. ತಾನು ಅಧ್ಯಕ್ಷರೊಂದಿಗೆ ಬೆಳಗ್ಗಿನ ಉಪಾಹಾರ ತೆಗೆದುಕೊಳ್ಳುತ್ತಿರುವುದಾಗಿಯೂ ಆಗ ಅವರಿಗೆ ಎಲ್ಲವನ್ನು ವಿವರಿಸುವುದಾಗಿಯೂ ಆತ ನನಗೆ ಹೇಳಿದರು.

ಎವರ್ಲಿ ಸಹೋದರರ ರೆಕಾರ್ಡ್, "ವೇಕ್ ಅಪ್ ಲಿಟ್ಲ್ ಸೂಸಿ" ಯನ್ನು ನುಡಿಸುವ ಮೂಲಕ ಒಂದೆರಡು ಅರ್ಕಾನ್ಸಾ ರೇಡಿಯೊ ಸ್ಟೇಷನ್‌ಗಳು ತೀರಿ ಹೋಗಿದ್ದ ನನ್ನ ಹೆಂಡತಿ ಸೂಸಿಯ ಲೇವಡಿ ಮಾಡುತ್ತಿದ್ದರು. ಆಕೆ ನಿಜವಾಗಿಯೂ ಸತ್ತಿಲ್ಲ, ನಾವು ಹಾಗೆ ನಟಿಸುತ್ತಿದ್ದೇವೆ, ಅದೊಂದು ಹಗರಣ ಎಂದು ಅವರು ಹೇಳಿದರು. ಅವರು ನಗಾಡುತ್ತಿದ್ದರು ಮತ್ತು ಗೇಲಿ ಮಾಡುತ್ತಿದ್ದರು. ಹಲವಾರು ವರ್ಷಗಳಿಂದ ನಮ್ಮ ಬಳಿ ಬಂದೂಕುಗಳಿದ್ದವು, ಆದರೆ ನಮ್ಮ ಚರ್ಚ್ ಸ್ವತ್ತಿನ ಮೇಲೆ ನಾವು ಆಟದ ಬಂದೂಕುಗಳಿಗೆ ಕೂಡ ಪ್ರವೇಶಾವಕಾಶ ನೀಡುವುದಿಲ್ಲ ಎಂದು ಕೂಡ ಅವರು ಹೇಳುತ್ತಿದ್ದರು.

ಮುಂದಿನ ಬೆಳಗ್ಗೆ ಹರ್ಬ್ ಎಲಿಂಗ್‌ವುಡ್ ನನಗೆ ಕರೆ ಮಾಡಿ, ತನ್ನ ಕೈಗಳನ್ನು ಕಟ್ಟಿ ಹಾಕಲಾಗಿದೆ; ತಾನು ಏನು ಮಾಡಲೂ ಸಾಧ್ಯವಿಲ್ಲ ಎಂದು ಅಧ್ಯಕ್ಷರು ಹೇಳಿದರು ಎಂದು ನನಗೆ ಹೇಳಿದರು. "ನೀವು [ಟೋನಿ] ನಾನು ಮಾಡಬಹುದಾದುದಕ್ಕಿಂತ ಹೆಚ್ಚಿನದನ್ನು ಮಾಡಬಹುದು. ಒಳ್ಳೆಯ ಕೆಲಸವನ್ನು ಮುಂದುವರಿಸಿರಿ' ಎಂದು ರಾನಿ ಹೇಳಿದರು" ಎಂದು ಆತ ನನಗೆ ಹೇಳಿದರು.

ಮಿನಿಸ್ಟ್ರಿಯಲ್ಲಿ ಇಪ್ಪತ್ತು ವರ್ಷಗಳ ಅಥವಾ ಅದಕ್ಕಿಂತ ಹೆಚ್ಚಿನ ಕಾಲ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಕ್ಕಾಗಿ ಬಹಳ ಒಳ್ಳೆಯ ಕ್ರಿಶ್ಚಿಯನ್ ಜನರಿಗೆ ನಾವು ಕೊಟ್ಟಿದ್ದ ನಮ್ಮ ಚರ್ಚ್ ಸ್ವತ್ತುಗಳಿಂದ ಹೊರಕ್ಕೆ ಹೋಗುವಂತೆ ಐಆರ್‌ಎಸ್ ಮತ್ತು ಫೆಡರಲ್ ನ್ಯಾಯಾಧೀಶರಾದ ಮಾರಿಸ್ ಅರ್ನಲ್ಡ್ ಮಾಡಿದರು. ಅವು ಪರಸ್ಪರರಿಗಾಗಿ (ಅವುಗಳನ್ನು ತಮಗಾಗಿ ಕಟ್ಟಿದ್ದರು, ಸರ್ಕಾರಕ್ಕಾಗಿ ಅಲ್ಲ, ಮತ್ತು ನನಗಾಗಿ ಖಂಡಿತವಾಗಿಯೂ ಅಲ್ಲ) ಸಹೋದರರು ಮತ್ತು ಸಹೋದರಿಯರು ಕಟ್ಟಿದ್ದ ಸುಂದರ ಮನೆಗಳಾಗಿದ್ದವು. ಐಆರ್‌ಎಸ್, ಬಿಎಟಿಎಫ್, ಎಫ್‌ಬಿಐ, ಲೇಬರ್ ವಿಭಾಗ, ಮತ್ತು ಇತರ "ಕಾನೂನು ಪಾಲನೆ" ಏಜೆನ್ಸಿಗಳು ಬಂದೂಕು ತೋರಿಸಿ ನಮ್ಮ ಎಲ್ಲಾ ಜನರನ್ನು ಬಲವಂತವಾಗಿ ಅವರ ಮನೆಗಳಿಂದ ಹೊರಹಾಕಿದರು, ಚಳಿಗಾಲದ ಮಧ್ಯದಲ್ಲಿ, ನೆಲದ ಮೇಲೆ ಹಿಮ ಮತ್ತು ಮಂಜು ಇರುವಾಗ ಅವರನ್ನು ಅವರ ಚಿಕ್ಕ ಮಕ್ಕಳು-ಮರಿಗಳೊಂದಿಗೆ ಬೀದಿಗಟ್ಟಿದರು. ಪ್ರಭು ಅವರನ್ನು ಮಾದಕ

ದ್ರವ್ಯಗಳ ಬದುಕಿನಿಂದ ರಕ್ಷಿಸಿದಕ್ಕೆ, ಅಪರಾಧವನ್ನು ಬಿಟ್ಟದ್ದಕ್ಕಾಗಿ, ಮತ್ತು ಬಂದೂಕು, ಚೂರಿ, ಮತ್ತು ಬಾಂಬ್ ಬದಲು ಬೈಬಲ್ ಹಿಡಿದುದಕ್ಕಾಗಿ ಇದು ಅವರಿಗೆ ಸಿಕ್ಕ ಪ್ರತಿಫಲ.

ವೆಸ್ಟ್ ಹಾಲಿವುಡ್ ಷೆರಿಫ್ಸ್ ಡಿಪಾರ್ಟ್ಮೆಂಟ್, ಸನ್ಸೆಟ್ ಸ್ಟ್ರಿಪ್ ಹತ್ತಿರದಲ್ಲಿ ಕ್ರೆಸೆಂಟ್ ಹೈಟ್ಸ್ ಬೂಲೆವಾರ್ಡ್‌ನಲ್ಲಿದ್ದ ನಮ್ಮ ಚರ್ಚ್ ನ ಮೇಲೆ ನಿರಂತರವಾಗಿ, ಪ್ರತಿ ದಿನ ದಾಳಿ ನಡೆಸಿತು. ಅವರು ನಮ್ಮ ಪ್ರಾರ್ಥನಾ ಮಂದಿರದೊಳಗೆ ಅಶ್ರು ವಾಯು ಬಾಂಬ್‌ಗಳನ್ನೆಸೆದು ಪ್ರಾರ್ಥಿಸುತ್ತಿದ್ದ ಜನರು ಹೊರಗೆ ಬಾರದಂತೆ ಬಾಗಿಲನ್ನು ಮುಚ್ಚಿಬಿಟ್ಟರು. ಅವರು ಜನರನ್ನು ಹೊಡೆದು ಜೈಲಿನಲ್ಲಿ ಬಿಸಾಡುತ್ತಿದ್ದರು. ಏಕೆಂದರೆ ನಗ್ನ ಬಾರ್‌ಗಳು, ಮತ್ತು ಬೆತ್ತಲೆ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಚಿತ್ರಮಂದಿರಗಳ ಮಾಲೀಕರೊಂದಿಗೆ ಸನ್ಸೆಟ್ ಸ್ಟ್ರಿಪ್ ಮೇಲಿದ್ದ ಬೆತ್ತಲೆ ಕೂಟಗಳು ಡೆಪ್ಯುಟಿಗಳಿಗೆ ಲಂಚ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಪ್ರಭುವು ಹಲವಾರು ಮಾದಕ ದ್ರವ್ಯ ವ್ಯಸನಿಗಳನ್ನು ಪರಿವರ್ತಿಸಿ ಅಪರಾಧದ ಬದುಕುಗಳಿಂದ ಅವರನ್ನು ಹೊರತರುತ್ತಿದ್ದದ್ದು ಇದಕ್ಕೆಲ್ಲ ಕಾರಣವಾಗಿತ್ತು.

ಕೊನೆಗೆ, ನಾವು ಸಾರ್ವಜನಿಕ ತೊಂದರೆ ಮತ್ತು ಆ ಪ್ರದೇಶವನ್ನು ಬಿಟ್ಟು ಹೋಗಬೇಕೆಂದು ಪಶ್ಚಿಮ ಹಾಲಿವುಡ್‌ನಲ್ಲಿ ಒಬ್ಬ ನ್ಯಾಯಾಧೀಶರು ಹೇಳಿದರು. ಸೂ ಮತ್ತು ನಾನು ಕ್ಯಾನ್ಯನ್ ಕಂಟ್ರಿಗೆ ಹೋಗಿ ಹಲವಾರು ವರ್ಷಗಳಿಂದ ಮುಚ್ಚಿ ಹೋಗಿದ್ದ ಒಂದು ರೆಸ್ಟೋರೆಂಟ್‌ಅನ್ನು ಖರೀದಿಸಿದೆವು. ಅದು ನಮ್ಮ ಚರ್ಚ್ ಆಯಿತು. ಚರ್ಚ್ ಪಕ್ಕದಲ್ಲಿದ್ದ ಒಂದು ಬೈಕರ್ ಬಾರ್ ಅನ್ನೂ ಕೊಂಡುಕೊಂಡು ಅದನ್ನು ಸಹೋದರರ ಶಯನಶಾಲೆಯನ್ನಾಗಿ ಮಾಡಿದೆವು. ನಮ್ಮ ಜನರು ಮದುವೆಯಾಗಿ ಮಕ್ಕಳನ್ನು ಪಡೆಯಲು ಆರಂಭಿಸಿದರು, ಆದ್ದರಿಂದ ಜಂಕ್ಷನ್ ಬಳಿ ಎರಡು ಅಪಾರ್ಟ್ಮೆಂಟ್ ಮನೆಗಳನ್ನು ಅವರಿಗಾಗಿ, ಸಹೋದರರು ಬೇಕರ್ಸ್ ಫೀಲ್ಡಿನಲ್ಲಿ ಹೊಲದಲ್ಲಿ ಕೆಲಸಗಾರರಾಗಿ ಸಂಪಾದಿಸಿದ ಹಣದಿಂದ ಖರೀದಿಸಿದೆವು.

ಸರ್ಕಾರವು ಅರ್ಕಾನ್ಸಾಸ್ ಮತ್ತು ಟೆನೆಸಿಯಲ್ಲಿದ್ದ ಅವರ ಎಲ್ಲಾ ಸ್ವತ್ತನ್ನು ಕದಿಯಿತು, ಮತ್ತು ನ್ಯಾಶ್‌ವಿಲ್‌ನಲ್ಲಿ, ಓಕ್ ಹಿಲ್‌ನ ಲೆಲ್ಯಾಂಡ್ ಮತ್ತು ಟೈನ್ ಮೂಲೆಯಲ್ಲಿದ್ದ ನಮ್ಮ ಮನೆಯನ್ನು ಸುಟ್ಟು ಹಾಕಿದರು. ಅವರು ನಮ್ಮ ರೆಸ್ಟೋರೆಂಟ್‌ಅನ್ನು, ಮೂರು ಗ್ಯಾಸ್ ಸ್ಟೇಷನ್‌ಗಳನ್ನು, ಮತ್ತು ಯೂನಿಯನ್ ಟೌನ್‌ನಲ್ಲಿ ನಮ್ಮ ಸಹೋದರರು ನಡೆಸುತ್ತಿದ್ದ ನಮ್ಮ ಫಾರಮನ್ನು ಮುಚ್ಚಿದರು. ನ್ಯಾಶ್‌ವಿಲ್ಲಿನ ಮ್ಯೂಸಿಕ್ ರೋನಲ್ಲಿದ್ದ ನಮ್ಮ ಚರ್ಚ್‌ಅನ್ನು ಮಾತ್ರವಲ್ಲದೆ ಟೆನೆಸಿ, ಅರ್ಕಾನ್ಸಾ, ಟೆಕ್ಸಾಸ್, ಮತ್ತು ಓಕ್ಲಹೋಮಗಳಲ್ಲಿದ್ದ ಎಲ್ಲಾ ಸಹೋದರರು ಮತ್ತು ಸಹೋದರಿಯರ ಸ್ವತ್ತುಗಳನ್ನು ಮಾರಾಟ ಮಾಡಿದರು. ಅವರು ಪುಡಿಗಾಸಿಗೆ ಅವನ್ನು ಮಾರಾಟ ಮಾಡಿದರು. ಮಕ್ಕಳ ಮೇಲೆ ದೌರ್ಜನ್ಯವೆಸಗಿದ್ದೇವೆ ಎಂದು ಕೂಡ ನಮ್ಮ ಮೇಲೆ ಸುಳ್ಳು ಆಪಾದನೆಯನ್ನು ಹೊರಿಸಲಾಯಿತು. ಅರ್ಕಾನ್ಸಾದ ಫೋರ್ಟ್ ಸ್ಮಿತ್ ಫೆಡರಲ್ ನ್ಯಾಯಾಧೀಶ ಮಾರಿಸ್ ಆರ್ನಲ್ಡ್, ಈಗ ಮಿಸೋರಿಯ ಸೇಂಟ್ ಲೂಯಿಸ್‌ನಲ್ಲಿದ್ದಾರೆ (ಎಂಟನೇ ಸರ್ಕಿಟ್‌ನಲ್ಲಿ), ಜನರ ಎಲ್ಲಾ ಸ್ವತ್ತು ನನ್ನದಾಗಿತ್ತು, ನನ್ನ ಅಪರ ಆತ್ಮವಾಗಿತ್ತು ಎಂದು ಹೇಳಿದರು. ನಾವು ಕಮ್ಯೂನಿಸ್ಟರು, "ಪಿಂಕೋಸ್", ಎಂದೂ ಕೂಡ ಅವರು ಹೇಳಿದರು.

ಸುಳ್ಳು ಐಆರ್‌ಎಸ್ ಮೊಕದ್ದಮೆಯಲ್ಲಿ ನನ್ನನ್ನು ನಾಲ್ಕು ವರ್ಷಗಳಲ್ಲಿ ಜೈಲಿನಿಂದ ಬಿಡುಗಡೆ ಮಾಡಲಾಯಿತು (ಒಳ್ಳೆಯ ನಡತೆಗಾಗಿ ಎರಡು ವರ್ಷ ಶಿಕ್ಷೆ ಕಡಿಮೆಯಾಯಿತು).

ನಾನು ಅವನನ್ನು ಅಪಹರಣ ಮಾಡಿ ಕೊಲ್ಲಬೇಕೆಂದಿದ್ದೆ ಎಂದು ನ್ಯಾಯಾಧೀಶ ಮಾರಿಸ್ ಆರ್ನಾಲ್ಡ್ ಹೇಳಿದರು. ದೇವರ ಕೃಪೆಯಿಂದ ನಾನು ಆ ಮೊಕದ್ದಮೆಯನ್ನು ಸೆಪ್ಟೆಂಬರ್ 12, 1991ರಂದು ಗೆದ್ದೆನು. ಈ ಫೆಡರಲ್ ನ್ಯಾಯಾಧೀಶರು, ನಾವು ಅವರಿಗೆ ಹಲವಾರು ವರ್ಷಗಳ ವರೆಗೆ ಆಧಾರ ನೀಡಿದ ನಂತರ ನಮ್ಮ ಚರ್ಚಿನಿಂದ ಸಹಸ್ರಾರು ಡಾಲರ್‌ಗಳನ್ನು ಕದ್ದ ಮಿಲ್ಲರ್ ಕುಟುಂಬದೊಂದಿಗೆ ಸೇರಿಕೊಂಡರು. ಅವರು ಸರಕುಗಳನ್ನು ವಿತರಿಸಲು ನಮ್ಮ ಟ್ರಕ್ಕುಗಳನ್ನು ಬಳಸಿದರು, ಮತ್ತು ಚರ್ಚ್ ಹಣವನ್ನು ತಮ್ಮ ಸ್ವಂತ ಬ್ಯಾಂಕ್ ಖಾತೆಗಳಲ್ಲಿ ಹಾಕಿದರು. ನ್ಯಾಯಾಧೀಶ ಆರ್ನಲ್ಡ್ ಅವರನ್ನು ತಮ್ಮ ಕೊಠಡಿಗೆ ಕರೆದು, "ನನ್ನ ಬಳಿ ಒಂದು ಉಪಾಯವಿದೆ. ಟೋನಿ ಅಲಾಮೊ ಬಳಿ ಇರುವ ಎಲ್ಲಾ ಸ್ವತ್ತು ಚರ್ಚಿನ ಜನರಿಗಾಗಿ ಅಲ್ಲ, ಬದಲಿಗೆ ಅದು ಆತನ ಅಪರ ಆತ್ಮ ಎಂದು ಹೇಳಿ ಆ ಎಲ್ಲಾ ಹಣವನ್ನು ನಿಮಗೆ ಮತ್ತು ನಿಮ್ಮ ವಕೀಲರಾದ ಪೆನ್ಸಿಲ್ವೇನಿಯದ ಪಿಟ್ಸ್‌ಬರ್ಗ್ ನ ಪೀಟರ್ ಜಾರ್ಜಿಯೇಡ್ಸ್ ಗೆ ಕೊಡುವೆವು" ಎಂದು ಹೇಳಿದರು.

ನಾನು ಆ ದೊಡ್ಡ ಓಕ್ ಮರಕ್ಕಿಂತ ನೂರು ದಶಲಕ್ಷಪಟ್ಟು ಬಲಿಷ್ಠನಾಗಬೇಕಾಗುತ್ತದೆ ಎಂದು ಪ್ರಭು ಹೇಳಿದುದರ ಅರ್ಥವೇನೆಂದು ನಾನು ಈ ಹಂತದಲ್ಲಿ ತಿಳಿದುಕೊಳ್ಳಲು ಆರಂಭಿಸಿದೆನು. ಯಾರಾದರೂ ಆ ದೊಡ್ಡ ಓಕ್ ಮರಕ್ಕಿಂತ ನೂರು ದಶಲಕ್ಷಪಟ್ಟು ಬಲಿಷ್ಠರಾಗಿರಲು ಒಂದೇ ಮಾರ್ಗವೆಂದರೆ ಪವಿತ್ರಾತ್ಮನ ಮೂಲಕ ಪ್ರಭುವಿನಲ್ಲಿರುವುದು. ಮತ್ತು ನೀವು ಪ್ರಭುವಿನಲ್ಲಿದ್ದರೆ, ಆಗ ನೀವು ಆ ಓಕ್ ಮರಕ್ಕಿಂತ ನೂರು ದಶಲಕ್ಷಪಟ್ಟು ಬಲಿಷ್ಠರಾಗಿರುತ್ತೀರಿ, ಮಾತ್ರವಲ್ಲ ಸಂಪೂರ್ಣ ಒಂದು-ವಿಶ್ವ ಸರ್ಕಾರಕ್ಕಿಂತ ನೀವು ನೂರು ದಶಲಕ್ಷಪಟ್ಟು ಬಲಿಷ್ಠರಾಗಿರುತ್ತೀರಿ, ಏಕೆಂದರೆ ದೇವರು ಸಂಪೂರ್ಣ ವಿಶ್ವಕ್ಕಿಂತ ನೂರು ದಶಲಕ್ಷಪಟ್ಟು ಪ್ರಬಲವಾಗಿದ್ದಾರೆ. ಆದರೆ ಒಂದು-ವಿಶ್ವ ಸರ್ಕಾರ ಇನ್ನೂ ಹಾಗೆ ಆಲೋಚಿಸುತ್ತಿಲ್ಲ, ಏಕೆಂದರೆ ಅವರು ಎಫ್‌ಬಿಐ, ಬಿಎಟಿಎಫ್, ಐಆರ್‌ಎಸ್, ಲೇಬರ್ ವಿಭಾಗ, ಮತ್ತು ಇತರ "ಕಾನೂನು ಪಾಲನಾ" ಏಜೆನ್ಸಿಗಳ ನೂರು ಅಥವಾ ಅಧಿಕ ಸದಸ್ಯರೊಂದಿಗೆ, ಎಲ್ಲೆಡೆ ಪ್ರಭುವಿನ ಚರ್ಚುಗಳ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದ್ದಾರೆ: ಲಾಸ್ ಏಂಜಲೀಸ್, ಅರ್ಕಾನ್ಸಾ, ಟೆನೆಸೀ, ಮತ್ತು ಇತರ ಎಲ್ಲೆಡೆ. ತಮ್ಮ ಚರ್ಚುಗಳಲ್ಲಿ ಸಹೋದರರು ಮತ್ತು ಸಹೋದರಿಯರಾಗಿದ್ದ ಪೋಷಕರ ಚಿಕ್ಕ ಮಕ್ಕಳು, ಅವರ ಮೇಲೆ ಯಾವುದೇ ದೌರ್ಜನ್ಯ ನಡೆಸಲಾಗಿದೆಯೆ ಎಂದು ನೋಡಲು, ತಮ್ಮ ಎಲ್ಲಾ ಬಟ್ಟೆಗಳನ್ನು ಕಳಚುವಂತೆ ಮಾಡಿದರು, ಮತ್ತು ಅಂಥದ್ದೇನೂ ಎಂದೂ ನಡೆದಿರಲಿಲ್ಲ.

ಆರು ವರ್ಷಗಳ ಹಿಂದೆ, ಸೈತಾನನ ಶಕ್ತಿಗಳು, ನಾನು ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಂಡಿದ್ದೇನೆ ಎಂದು ಹೇಳಿದರು. ಸಹಜವಾಗಿಯೇ ಅದು ಸುಳ್ಳು. ಆದರೂ, ನನಗೆ ಫೆಡರಲ್ ಕಾರಾಗೃಹದಲ್ಲಿ 175 ವರ್ಷಗಳ ಶಿಕ್ಷೆಯನ್ನು ವಿಧಿಸಲಾಯಿತು. ಅವರು ಈ ಮಹಿಳೆಯರಿಗೆ ಅಪಾರ ಮೊತ್ತದ ಹಣ ಕೊಟ್ಟರು. ಅವರಲ್ಲಿ ಪ್ರತಿಯೊಬ್ಬರು $100,000.00 ಪಡೆದರು. ಈಗ ಅವರು ತಮಗಾಗಿ ಹಲವು ದಶಲಕ್ಷ ಗಳಿಸಲು ಎಲ್ಲಾ ಕ್ರಿಸ್ತಿಯನ್ನರ ಸ್ವತ್ತನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ. ಸೈತಾನನ ಸುಳ್ಳುಗಳ ಆಧಾರದ ಮೇಲೆ ನಮ್ಮ ಮೇಲೆ ಸಹಸ್ರಾರು ದುರಾಚಾರಗಳನ್ನು ನಡೆಸಲಾಗಿದೆ, ಅವು ಎಷ್ಟಿವೆ ಎಂದರೆ ಅವುಗಳೆಲ್ಲವನ್ನು ಈ ಸಾಹಿತ್ಯದಲ್ಲಿ ಹೇಳಲು ನನಗೆ ಸಾಧ್ಯವಾಗುವುದಿಲ್ಲ. ಆದರೂ, ಈ ಪತ್ರಿಕೆಯ ಆರಂಭದಲ್ಲಿ ನಾನು ಹೇಳಿದಂತೆ, ನಮ್ಮ ಪ್ರಭು ಮತ್ತು ರಕ್ಷಕರಾದ ಯೇಸು ಕ್ರಿಸ್ತರಿಗೆ ಹೋಲಿಸಿದರೆ ಸಹೋದರರು ಮತ್ತು ಸಹೋದರಿಯರು ಮತ್ತು ನಾನು ಬಹಳ ಕಡಿಮೆ ಹಿಂಸೆಯನ್ನು ಅನುಭವಿಸಿದ್ದೇವೆ.

ಇಬ್ರಿಯರಿಗೆ ಅಧ್ಯಾಯ 11, ನಂಬಿಕೆಯ ಮೂಲಕ ಎಷ್ಟು ಜನರು ಎಷ್ಟೆಲ್ಲ ಕಡುಸಂಕಟಗಳನ್ನು ಮತ್ತು ಹಿಂಸೆಗಳನ್ನು ಸಹಿಸಿದರು ಎಂದು ನಮಗೆ ಹೇಳುತ್ತದೆ. ಶ್ಲೋಕ 1-3 ಹೀಗೆಂದು ಹೇಳುತ್ತವೆ, "ನಂಬಿಕೆಯು ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸೆಯಿಂದಿರುವುದೂ, ಕಾಣದ ಸಂಗತಿಗಳು ಇವೆಯೆಂದು ತಿಳಿದುಕೊಳ್ಳುವುದೂ ಆಗಿದೆ. ಇದರಿಂದಾಗಿಯೇ ನಮ್ಮ ಪೂರ್ವಿಕರು ಒಳ್ಳೆಯ ಹೆಸರನ್ನು ಹೊಂದಿದರು. ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ."(ಕಿಂಗ್ ಜೇಮ್ಸ್ ಆವೃತ್ತಿ)

ಇಬ್ರಿಯರಿಗೆ ಹನ್ನೊಂದನೇ ಅಧ್ಯಾಯ, ಶ್ಲೋಕ 32-40ರಲ್ಲಿ ನಾವು ಹೀಗೆಂದು ಓದುತ್ತೇವೆ, "ಇನ್ನೂ ಏನು ಹೇಳಬೇಕು? ಗಿದ್ಯೋನ್, ಬಾರಾಕ್, ಸಂಸೋನ್, ಎಫ್ತಾ, ದಾವೀದ್, ಸಮುವೇಲ್ ಎಂಬುವರ ವೃತ್ತಾಂತವನ್ನೂ ಪ್ರವಾದಿಗಳ ವೃತ್ತಾಂತವನ್ನೂ ವಿವರವಾಗಿ ಹೇಳಬೇಕಾದರೆ ನನಗೆ ಸಮಯ ಸಾಲದು. ನಂಬಿಕೆಯ ಮೂಲಕ ಅವರು ರಾಜ್ಯಗಳನ್ನು ಸ್ವಾಧೀನಮಾಡಿಕೊಂಡರು; ನೀತಿಯನ್ನು ನಡೆಸಿದರು; ವಾಗ್ದಾನಗಳನ್ನು ಪಡಕೊಂಡರು; ಸಿಂಹಗಳ

*(ಪುಟ 4ರಲ್ಲಿ ಮುಂದುವರಿದಿದೆ)*

## ವಾಣಿಗಳ ಅರ್ಥವಿವರಣೆ, ಸೂಸನ್ ಅಲಾಮೊ
## ಜನವರಿ ೧, ೧೯೭೩

ಹೌದು, ನಾನು ನಿಮಗೆ ಹೇಳುವುದೇನಂದರೆ, ನಿಮಗೆ ತೀರ್ಪಾಗುವದು. ಜೀವಂತ ದೇವರ ಆತ್ಮವನ್ನು ನಿಮಗೆ ವಿವೇಕ, ಜ್ಞಾನ, ಮತ್ತು ಗ್ರಹಿಕೆಯಾಗಿ ಕೊಡಲಾಗಿದೆ. ಹೌದು, ನಾನು, ಕರ್ತನಾದ ನಿಮ್ಮ ದೇವರು, ನಿಮ್ಮನ್ನು ಕತ್ತಲೆಯಿಂದ ಹೊರಗೆ ನನ್ನ ನಿರಂತರ, ಶಾಶ್ವತ ಜೀವಕ್ಕೆ ಕರೆತಂದಿದ್ದೇನೆ. ನಾನು ನಿಮ್ಮನ್ನು ಅತಿ ಎತ್ತರದ ಬೆಟ್ಟದ ಮೇಲೆ ನಿಲ್ಲಿಸಿದ್ದೇನೆ. ನಾನು ನಿಮ್ಮ ಸುತ್ತಮುತ್ತಲೂ ಬೆಂಕಿಯ ಗೋಡೆಯನ್ನು ಕಟ್ಟಿದ್ದೇನೆ. ಹೌದು, ನಾನು ನಿಮ್ಮ ಸುತ್ತ ಬೇಲಿ ಹಾಕಿದ್ದೇನೆ. ಆದರೆ ಗೋಡೆಗಳ ಸುತ್ತಮುತ್ತ ವೈರಿಯು ಆವರಿಸಿದ್ದಾರೆ. ಹೌದು, ಅವರು ನಿಮ್ಮ ನಡುವೆಯೂ ಇದ್ದಾರೆ. ಭಯಪಡಬೇಡಿ. ನೀವು ನನ್ನನ್ನು ನೆಚ್ಚಿದರೆ ಮತ್ತು ಕೇವಲ ನನ್ನನ್ನು ಆಶ್ರಯಿಸಿದರೆ, ನಾನು ನಿಮ್ಮನ್ನು ನಡೆಸುವೆನು. ನನ್ನ ಮಕ್ಕಳೇ, ಶಾಶ್ವತ ತೊರೆಗಳಿಗೆ, ನಾನು ನಿಮ್ಮನ್ನು ಶಾಶ್ವತ ಬದುಕಿನತ್ತ ನಡೆಸುವೆನು. ಹೌದು, ಏಕೆಂದರೆ, ನಾನು, ಕರ್ತನಾದ ನಿಮ್ಮ ದೇವರು, ನಿಮ್ಮೊಂದಿಗಿದ್ದೇನೆ.

## ಸಂಪೂರ್ಣ ವಿಶ್ವದಲ್ಲಿ ಅತ್ಯಂತ ಪ್ರಭಾವಿ ಸ್ಥಾನ ಟೋನಿ ಅಲಾಮೊ ಅವರಿಂದ

*(ಪುಟ 3 ರಿಂದ ಮುಂದುವರಿದಿದೆ)*

ಬಾಯಿ ಕಟ್ಟಿದರು; ಬೆಂಕಿಯ ಬಲವನ್ನು ಆರಿಸಿದರು; ಕತ್ತಿಯ ಅಲಗಿಗೆ ತಪ್ಪಿಸಿಕೊಂಡರು; ನಿರ್ಬಲರಾಗಿದ್ದು ಬಲಿಷ್ಠರಾದರು; ಯುದ್ಧದಲ್ಲಿ ಪರಾಕ್ರಮಶಾಲಿಗಳಾದರು; ಪರರ ದಂಡುಗಳನ್ನು ಓಡಿಸಿಬಿಟ್ಟರು. ಸ್ತ್ರೀಯರು ಸತ್ತುಹೋಗಿದ್ದ ತಮ್ಮವರನ್ನು ಪುನರುತ್ಥಾನದಿಂದ ತಿರುಗಿ ಹೊಂದಿದರು. ಕೆಲವರು ತಾವು ಯಾತನೆಗೆ ಒಳಪಟ್ಟಾಗ ಶ್ರೇಷ್ಠ ಪುನರುತ್ಥಾನವನ್ನು ಹೊಂದುವುದಕ್ಕೋಸ್ಕರ ಬಿಡುಗಡೆ ಬೇಡವೆಂದು ಹೇಳಿ ಮುರಿಸಿಕೊಂಡು ಸತ್ತರು. ಬೇರೆ ಕೆಲವರು ಅಪಹಾಸ್ಯ ಕೊರಡೆಯ ಪೆಟ್ಟು, ಬೇಡಿ, ಸೆರೆಮನೆ ಇವುಗಳನ್ನು ಅನುಭವಿಸಿದರು. ಕೆಲವರನ್ನು ಜನರು ಕಲ್ಲೆಸೆದು ಕೊಂದರು; ಕೆಲವರನ್ನು ಗರಗಸದಿಂದ ಕೊಯ್ದು ಕೊಂದರು; ಕೆಲವರು ಆಮಿಷಕ್ಕೆ ಒಳಗಾದರು; ಕೆಲವರನ್ನು ಕತ್ತಿಯಿಂದ ಕೊಂದರು. ಕೆಲವರು ಕೊರತೆ, ಹಿಂಸೆ, ಬಾಧೆ ಇವುಗಳನ್ನು ಅನುಭವಿಸುವವರಾಗಿದ್ದು ಕುರಿ ಮೇಕೆಗಳ ಚರ್ಮಗಳನ್ನು ಉಟ್ಟುಕೊಂಡವರಾಗಿ ತಿರುಗಾಡಿದರು. ಇಂಥವರಿಗೆ ಈ ಲೋಕವು ಯೋಗ್ಯಸ್ಥಳವಲ್ಲ; ಅವರು ತಮ್ಮ ದೇಶದ ಕಾಡು ಬೆಟ್ಟ ಗವಿ ಕುಣಿಗಳಲ್ಲಿ ಅಲೆಯುವವರಾಗಿದ್ದರು. ಇವರೆಲ್ಲರೂ ನಂಬಿಕೆಯ ಮೂಲಕ ಒಳ್ಳೆಯ ಹೆಸರನ್ನು ಸಂಪಾದಿಸಿಕೊಂಡಿದ್ದರೂ ವಾಗ್ದಾನದ ಫಲವನ್ನು ಹೊಂದಲಿಲ್ಲ; ದೇವರು ನಮಗೋಸ್ಕರ ಶ್ರೇಷ್ಠವಾದ ಭಾಗ್ಯವನ್ನು ಏರ್ಪಡಿಸಿ ನಾವಿಲ್ಲದೆ ಅವರು ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದನು."

ಇಬ್ರಿಯರಿಗೆ ಅಧ್ಯಾಯ 12 ಹೀಗೆಂದು ಮುಂದುವರಿಯುತ್ತದೆ, "ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲೂ ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ವಹಿಸಲಾಗಿರುವ ಓಟವನ್ನು ತಾಳ್ಮೆಯಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ನಿಕೃಷ್ಟವಾಗಿ ಕಂಡು ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು. ನೀವು ಪಾಪಕ್ಕೆ ವಿರೋಧವಾಗಿ ಹೋರಾಡುವದರಲ್ಲಿ ಪ್ರಾಣಾಪಾಯದ ತನಕ ಇನ್ನೂ ಅದನ್ನು ಎದುರಿಸಲಿಲ್ಲ (ಯೇಸು ಎದುರಿಸಿದಂತೆ). ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು ಮರೆತುಬಿಟ್ಟಿದ್ದೀರೋ? ಏನೆಂದರೆ – ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ; ಆತನು ನಿನ್ನನ್ನು ಗದರಿಸುವಾಗ ಬೇಸರಗೊಳ್ಳಬೇಡ; ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ; ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ದಂಡಿಸುತ್ತಾನೆ ಎಂಬುದು. ನೀವು ಶಿಕ್ಷಿತರಾಗುವುದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ; ದೇವರು ನಿಮ್ಮನ್ನು ಮಕ್ಕಳೆಂದು ನಡೆಸಿಕೊಳ್ಳುತ್ತಾನೆ. ತಂದೆಯಿಂದ ಶಿಕ್ಷೆ ಹೊಂದದ ಮಗನೆಲ್ಲಿ? ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರದಿಂದ ಹುಟ್ಟಿದವರೇ [ತಂದೆಯಿಲ್ಲದ ಮಕ್ಕಳು] ಹೊರತು ಪುತ್ರರಲ್ಲ. ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರ ಸಂಬಂಧವಾದ ತಂದೆಗಳನ್ನು ಸನ್ಮಾನಿಸಿದೆವಷ್ಟೆ; ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ. ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು; ಆತನಾದರೋ ನಾವು ತನ್ನ ಪವಿತ್ರತೆಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ.

"ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ. ಆದ್ದರಿಂದ ಜೋಲುಬಿದ್ದ ಕೈಗಳನ್ನೂ ನಡುಗುವ ಮೊಣಕಾಲುಗಳನ್ನೂ ಸುಧಾರಿಸಿಕೊಳ್ಳಿರಿ; ನಿಮ್ಮ ಕಾಲುಗಳಿಂದ ನೆಟ್ಟಗೆ ಮುಂದೆ ನಡೆಯಿರಿ. ಹೀಗೆ ಮಾಡಿದರೆ ಕುಂಟುಕಾಲು ಉಳುಕಿ ಹೋಗದೆ ವಾಸಿಯಾಗುವುದು. ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ ಪವಿತ್ರತೆಯನ್ನು ಹೊಂದಿರುವುದಕ್ಕೂ ಪ್ರಯತ್ನ ಮಾಡಿರಿ; ಪವಿತ್ರತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ. ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ಯಾವ ವಿಷವುಳ್ಳ ಬೇರೂ ನಿಮ್ಮಲ್ಲಿ ಚಿಗುರಿ ಅಸಮಾಧಾನವನ್ನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ ಯಾವ ಜಾರನಾಗಲಿ ಏಸಾವನಂಥ ಪ್ರಾಪಂಚಿಕನಾಗಲಿ ನಿಮ್ಮಲ್ಲಿ ಇರದಂತೆ ಜಾಗ್ರತೆಯಿಂದ ನೋಡಿಕೊಳ್ಳಿರಿ. ಆ ಏಸಾವನು ಒಂದೇ ಒಂದು ಊಟಕ್ಕೋಸ್ಕರ ತನ್ನ ಚೊಚ್ಚಲುತನದ ಹಕ್ಕನ್ನು ಕೊಟ್ಟುಬಿಟ್ಟನು; ಅನಂತರದಲ್ಲಿ ತನ್ನ ತಂದೆಯ ಆಶೀರ್ವಾದವನ್ನು ಬಾಧ್ಯವಾಗಿ ಹೊಂದಬೇಕೆಂದು ಕಣ್ಣೀರು ಸುರಿಸುತ್ತಾ ಬೇಡಿಕೊಂಡರೂ, ನಡೆದದ್ದನ್ನು ಇಲ್ಲದ ಹಾಗೆ ಮಾಡುವುದಕ್ಕೆ ಮಾರ್ಗವಿಲ್ಲದೆ ನಿರಾಕರಿಸಲ್ಪಟ್ಟನೆಂದು ಬಲ್ಲಿರಿ.

"ನೀವು ಮುಟ್ಟುವುದಕ್ಕೆ ಸಾಧ್ಯವಾದಂಥ ಮತ್ತು ಬೆಂಕಿಹತ್ತಿದಂಥ ಬೆಟ್ಟಕ್ಕೂ ಮೋಡದ ಮಬ್ಬಿಗೂ ಕತ್ತಲೆಗೂ ಬಿರುಗಾಳಿಗೂ ತುತ್ತೂರಿಯ ಧ್ವನಿಗೂ ಮಾತುಗಳ ಶಬ್ದಕ್ಕೂ ಬಂದವರಲ್ಲ. ಆ ಶಬ್ದವನ್ನು ಕೇಳಿದವರು ತಮಗೆ ಇನ್ನು ಒಂದು ಮಾತನ್ನಾದರೂ ಹೇಳಬಾರದೆಂದು ಬೇಡಿಕೊಂಡರು; ಯಾಕೆಂದರೆ – ಒಂದು ಮೃಗವಾದರೂ ಬೆಟ್ಟಕ್ಕೆ ಮುಟ್ಟಿದರೆ ಅದನ್ನು ಕಲ್ಲೆಸೆದು ಕೊಲ್ಲಬೇಕೆಂಬ ಅಥವಾ ಭರ್ಜಿಯಿಂದ ತಿವಿದು ಕೊಲ್ಲಬೇಕೆಂಬ ಆಜ್ಞೆಯನ್ನು ತಾಳಲಾರದೆ ಇದ್ದರು. ಇದಲ್ಲದೆ ಅಲ್ಲಿ ತೋರಿದ್ದು ಅಷ್ಟು ಭಯಂಕರವಾಗಿದ್ದುದರಿಂದ ಮೋಶೆಯು – ನನಗೆ ಬಹು ಭಯವಾಗುತ್ತದೆ, ನಡುಗುತ್ತೇನೆ ಎಂದು ಹೇಳಿದನು. ಆದರೆ ನೀವು ಚಿಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ [ನಾವೆಲ್ಲರೂ ಒಟ್ಟಾಗಿ ಅನುಭವಿಸಿದ ಹಿಂಸೆಗಿಂತ ಹೆಚ್ಚಿನದ್ದನ್ನು ಯೇಸು, ಪಾಪವಿಲ್ಲದೆ, ಗೊಣಗಾಟವಿಲ್ಲದೆ ಅನುಭವಿಸಿದರು.[2] ಆದ್ದರಿಂದ ಆತ ನಮ್ಮ ಮಧ್ಯಸ್ಥನಾಗಲು ಅರ್ಹರಾಗಿದ್ದಾರೆ[3]], ಹೇಬೆಲನ ರಕ್ತಕ್ಕಿಂತ ಅತ್ಯುತ್ತಮವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ [ಯೇಸುವಿನ ರಕ್ತ ನಮ್ಮನ್ನು ಎಲ್ಲಾ ಪಾಪಗಳಿಂದ ಶುದ್ಧಗೊಳಿಸುತ್ತದೆ, ಆದ್ದರಿಂದ ನಾವು ಮುಂದೆಂದೂ ಪಾಪ ಮಾಡುವಂತಿಲ್ಲ; ಇನ್ನು ಮುಂದೆ ಪಾಪ ಮಾಡಬೇಡಿ,[4] ಎಂದೂ ದೂರಬೇಡಿ, ಎಂದೂ ಗೊಣಗಾಡಬೇಡಿ, ಏಕೆಂದರೆ ನಮಗೆ ಪರಲೋಕದಲ್ಲಿ ನಿರಂತರತೆಯನ್ನು ಕೊಡಲಾಗಿದೆ, ಪರಲೋಕದಲ್ಲಿ ಶಾಶ್ವತತೆಯನ್ನು ಕೊಡಲಾಗಿದೆ[5]].

"ನೀವು ಮಾತಾಡುತ್ತಿರುವಾತನ [ದೇವರ] ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು [ಕ್ರಿಸ್ತರನ್ನು ಪಾಲಿಸಲು ಇಚ್ಛೆಯುಳ್ಳವರಾಗಿರಿ, ಏಕೆಂದರೆ ಆತ ನಮಗೆ ನಿರಂತರ ಬದುಕನ್ನು ಕೊಟ್ಟಿರುವುದು ಆತ ಹೇಳಿದ್ದನ್ನು, ಆತನ ಆಜ್ಞೆಗಳನ್ನು ಒಪ್ಪಿಕೊಳ್ಳುವುದಕ್ಕಾಗಿಯೇ ಹೊರತು ನಿರಾಕರಿಸುವುದಕ್ಕಾಗಿ ಅಲ್ಲ.[6] ಏಕೆಂದರೆ ಆತ ಹೀಗೆಂದರು, 'ಆತನನ್ನು ಬಲ್ಲೆನೆಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಳ್ಳದೆ ನಡೆಯುವವನು ಸುಳ್ಳುಗಾರನಾಗಿದ್ದಾನೆ; ಸತ್ಯವೆಂಬುದು ಅವನಲ್ಲಿ ಇಲ್ಲ" (1 ಯೋಹಾನನು 2:4). 'ನರಳುವವರಾಗಿದ್ದರೆ ಆತನೊಡನೆ ಆಳುವೆವು; ನಾವು ಆತನನ್ನು ತಿರಸ್ಕರಿಸಿದರೆ ಆತನು ಸಹ ನಮ್ಮನ್ನು ತಿರಸ್ಕರಿಸುತ್ತಾನೆ' (2 ತಿಮೊಥೆಯನಿಗೆ 2:12). ಮತ್ತಾಯ 10:33ರಲ್ಲಿ(ಕೆಜೆವಿ) ಯೇಸು ಹೀಗೆಂದು ಹೇಳಿದರು, "ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು'].

"ಭೂಮಿಯ ಮೇಲೆ ದೈವೋಕ್ತಿಗಳನ್ನಾಡಿದವನಿಗೆ [ಮೋಶೆ] ಕಿವಿಗೊಡುವ ಮನಸ್ಸಿಲ್ಲದೆ ಇದ್ದ ಇಸ್ರಾಯೇಲ್ಯರು ದಂಡನೆಗೆ ತಪ್ಪಿಸಿಕೊಳ್ಳದಿದ್ದರೆ ಪರಲೋಕದಿಂದ ಮಾತಾಡುವವನಿಗೆ [ದೇವರು] ನಾವು ಕಿವಿಗೊಡುವ ಮನಸ್ಸಿಲ್ಲದೆ ತೊಲಗಿದರೆ ಹೇಗೆ ತಪ್ಪಿಸಿಕೊಂಡೇವು? ಆತನ ಧ್ವನಿಯು ಆ ಕಾಲದಲ್ಲಿ ಭೂಮಿಯನ್ನು ಕದಲಿಸಿತು; ಈಗಲಾದರೋ ಆತನು – ಇನ್ನೊಂದೇ ಸಾರಿ ನಾನು ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ನಡುಗಿಸುವೆನೆಂದು ವಾಗ್ದಾನ ಮಾಡಿದ್ದಾನೆ ಇನ್ನೊಂದೇ ಸಾರಿ ಎಂಬೀ ಮಾತನ್ನು ಯೋಚಿಸಿದರೆ ಕದಲಿಸಿರುವ ವಸ್ತುಗಳು ನಿರ್ಮಿತವಾದವುಗಳಾದದರಿಂದ ತೆಗೆದುಹಾಕಲ್ಪಡಬೇಕೆಂಬುದು ಸ್ಪಷ್ಟವಾಗುತ್ತದೆ; ಆಗ ಕದಲಿಸದೆ ಇರುವ ವಸ್ತುಗಳು ಸ್ಥಿರವಾಗಿ ನಿಲ್ಲುವವು [ಕಷ್ಟ ಕಾರ್ಪಣ್ಯಗಳ ಕಾರಣ ನೀವು ಕ್ರಿಸ್ತರಿಂದ ಮತ್ತು ಆತನ ಆಜ್ಞೆಗಳನ್ನು ಪಾಲಿಸುವುದರಿಂದ ದೂರ ಕದಲಿಸಲ್ಪಟ್ಟರೆ, ಪರಲೋಕವನ್ನು ಪ್ರವೇಶಿಸಲು ನೀವು ಆಧ್ಯಾತ್ಮಿಕವಾಗಿ ತುಂಬಾ ದುರ್ಬಲ ಮತ್ತು ಭ್ರಷ್ಟರಾಗಿರುತ್ತೀರಿ, ಆದ್ದರಿಂದ ನೀವು ನಿರಂತರತೆಯನ್ನು ನರಕದಲ್ಲಿ, ನಂತರ ಬೆಂಕಿಯ ಕೆರೆಯಲ್ಲಿ ತೀವ್ರವಾದ ಮತ್ತು ಹೇಳಲು ಅಸಾಧ್ಯವಾದ ಚಿತ್ರಹಿಂಸೆಗಳಲ್ಲಿ ಕಳೆಯುವಿರಿ (ಪ್ರಕಟನೆ 20:15, 21:8, 27). ಇದನ್ನು ನಾನು ಹೇಳಲಿಲ್ಲ; ದೇವರು ಹೇಳಿದ್ದಾರೆ. ನಾನು ಕೇವಲ ಇದನ್ನು ಬೋಧಿಸುತ್ತೇನೆ].

"ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು [ಆಧ್ಯಾತ್ಮಿಕ ಶಕ್ತಿ, ಯಾವುದೇ ಓಕ್ ಮರಕ್ಕಿಂತ

**1** ವಿಮೋಚನಾಕಾಂಡ 19:16-19 **2** ಯೆಶಾಯ 42:1-4, 52:14, ಅಧ್ಯಾಯ. 53, ಮತ್ತಾಯ 26:38-45, 62-64, 27:11-50, ಯೋಹಾನ 12:23-33, ಫಿಲಿಪ್ಪಿಯವರಿಗೆ 2:8, 14-15, ಇಬ್ರಿಯರಿಗೆ 4:15 **3** 1 ತಿಮೊಥೆಯನಿಗೆ 2:5-6, ಇಬ್ರಿಯರಿಗೆ 8:1-6, 9:11-26 **4** ಯೋಹಾನ 5:14, 8:11, ರೋಮಾಪುರದವರಿಗೆ 6:1-7, 1 ಯೋಹಾನನು 3:6-10 **5** ಯೆಶಾಯ 64:4, ರೋಮಾಪುರದವರಿಗೆ 8:17-18, 1 ಕೊರಿಂಥದವರಿಗೆ 10:10-11, ಎಫೆಸದವರಿಗೆ 1:3-14, 2:4-7, ಫಿಲಿಪ್ಪಿಯವರಿಗೆ 2:14-16 **6** ಅರಣ್ಯಕಾಂಡ 14:26-38, 1 ಸಮುವೇಲನು 15:22-23, ರೋಮಾಪುರದವರಿಗೆ 1:5-6, 6:16, 12:1-2, 2 ಕೊರಿಂಥದವರಿಗೆ 10:3-6, ಇಬ್ರಿಯರಿಗೆ 3:7-15, 1 ಯೋಹಾನನು 2:17

ನೂರು ದಶಲಕ್ಷಪಟ್ಟು ಹೆಚ್ಚು ಬಲಿಷ್ಠ], ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ ['ಯೆಹೋವನ ಭಯವೇ ಜ್ಞಾನಕ್ಕೆ ಮೂಲವು' (ಜ್ಞಾನೋಕ್ತಿಗಳು 9:10). 'ಇಗೋ, ಕರ್ತನ ಭಯವೇ ಜ್ಞಾನವು, ದುಷ್ಟತನವನ್ನು ಬಿಡುವುದೇ ವಿವೇಕವು' (ಯೋಬನು 28:28).'ಪರಿಶುದ್ಧನ ತಿಳುವಳಿಕೆಯೇ ವಿವೇಕವು' (ಜ್ಞಾನೋಕ್ತಿಗಳು 9:10).]; ಯಾಕೆಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ" (ಇಬ್ರಿಯರಿಗೆ 12:1-29 ಕೆಜೆವಿ).

ನಾವು ಆತ್ಮದಲ್ಲಿ ವಿಜಯಿಗಳಾಗಿ ಎಂದಾದರೊಮ್ಮೆ ಪರಲೋಕವನ್ನು ಪ್ರವೇಶಿಸಲು ಸಾಧ್ಯವಾಗಬೇಕಾದರೆ ನಾವು ಸಹಿಸಬೇಕಾದ ಕಷ್ಟ ಕಾರ್ಪಣ್ಯಗಳ ಬಗ್ಗೆ, ಮತ್ತು ಹಿಂಸೆಗಳ ಬಗ್ಗೆ ದೂರಲು ಪ್ರಾರಂಭಿಸಿದರೆ, ಬಿದ್ದು ಹೋಗುವ ಅಪಾಯದಲ್ಲಿದ್ದೇವೆ ಎಂಬುದು ಸತ್ಯಾಂಶ. ಆದುದರಿಂದಲೆ ಗೊಣಗಾಡುವುದು ಮತ್ತು ದೂರುವುದು ಬಹಳ ಗಂಭೀರ ತಪ್ಪು. ಅದು ನೀವು ನಿಮ್ಮ ಬಗ್ಗೆ ವ್ಯಸನ ಪಡುವುದರ ಆರಂಭವಾಗಿದೆ, ಮತ್ತು ನಮ್ಮ ಪ್ರಭು ಮತ್ತು ರಕ್ಷಕರಾದ ದೇವರ ಕುರಿಯಾದಾತನಿಂದ ದೂರ ಸರಿಯಲು ತನಗೆ ಹಕ್ಕಿದೆ ಎಂದು ನಮ್ಮ ಆತ್ಮ ವಾಸಿಸುವ ಮಣ್ಣಿನ ಮಡಿಕೆ ಅಥವಾ ಮಾಂಸಖಂಡವು ಆಲೋಚಿಸಲು ಆರಂಭಿಸುತ್ತದೆ. ಇದು ನಮ್ಮ ಆತ್ಮಕ್ಕೆ ನಿರಂತರವಾಗಿ ಅಪಾಯಕಾರಿ. ಅದು ನಾವು ಗ್ರ್ಯಾಂಡ್ ಕ್ಯಾನ್ಯನ್‌ನ ಒಂದು ತುದಿಯಿಂದ ಮತ್ತೊಂದು ತುದಿಗೆ ತಂತಿಯ ಮೇಲೆ ನಡೆಯುವುದಕ್ಕೆ ಆಧ್ಯಾತ್ಮಿಕವಾಗಿ ಸಮನಾಗಿದೆ. ಒಂದು ದುಷ್ಟ ಸಿದ್ಧಾಂತದ ಗಾಳಿ ನಿಮ್ಮನ್ನು ತಂತಿಯಿಂದ ಹಾರಿಸಬಹುದು, ಮತ್ತು ಕೆಳಗೆ ನಿಮ್ಮನ್ನು ಹಿಡಿಯಲು ಯಾವ ಬಲೆಯೂ ಇಲ್ಲ. ನರಕದಲ್ಲಿ ಮತ್ತು ಬೆಂಕಿಯ ಕೆರೆಯಲ್ಲಿರುವುದು ಇದಕ್ಕಿಂತಲೂ ಅಸಹನೀಯವಾಗಿರುತ್ತದೆ, ಆದರೆ ನಮ್ಮ ಕಷ್ಟ ಕಾರ್ಪಣ್ಯಗಳ ಬಗ್ಗೆ ಗೊಣಗಾಡುತ್ತಾ ದೂರುತ್ತಾ ನಮ್ಮ ಬಗ್ಗೆ ನಾವೇ ವ್ಯಸನ ಪಡುವುದರಿಂದ ಕಹಿ ಬೇರುಗಳು ನಮ್ಮ ಆತ್ಮಗಳ ಮೇಲೆ ಹಿಡಿತ ಸಾಧಿಸಿ ನಮ್ಮನ್ನು ಹೊಲಸುಗೊಳಿಸಿದಾಗ ಹೀಗೇ ಆಗುವುದು. ಪರಲೋಕಕ್ಕೆ ಹೋಗಲು ನಮಗೆ ಒಂದು ಅವಕಾಶ ದೊರಕಿಸಿ ಕೊಡುವ ಉದ್ದೇಶದಿಂದ ಕ್ರಿಸ್ತರು ಅನುಭವಿಸಿದುದಕ್ಕಿಂತ ಹೆಚ್ಚು ತೀವ್ರವಾದುದನ್ನು ನಾವು ಅನುಭವಿಸುವುದಿಲ್ಲ, ಅದೂ ನಾವು ಈ ಸತ್ಯಾಂಶದಿಂದ ಕದಲಿಸಲ್ಪಡದಿದ್ದರೆ ಮಾತ್ರ.

ಸಂಪೂರ್ಣ ದೇಶವು ಅಟಾರ್ನಿ ಜೆನರಲ್ ಗೆ, "ಅವನನ್ನು ಶಿಲುಬೆಗೇರಿಸಿ! ಅವನನ್ನು ಶಿಲುಬೆಗೇರಿಸಿ! ಅವನನ್ನು ಶಿಲುಬೆಗೇರಿಸಿ! ಅವಳನ್ನು ಶಿಲುಬೆಗೇರಿಸಿ! ಅವಳನ್ನು ಶಿಲುಬೆಗೇರಿಸಿ! ಅವಳನ್ನು ಶಿಲುಬೆಗೇರಿಸಿ!" ಎಂದು ಕೂಗುತ್ತಾ ನಿಮ್ಮತ್ತ ತಮ್ಮ ದ್ವೇಷವನ್ನು ತೋರಿಸಿದೆಯೆ?[7] ಮತ್ತು ಅವರು, ತಮ್ಮ ಹೊಲಸು ಉಸಿರಿನಿಂದ, ನಿಮ್ಮ ಮುಖದ ಮೇಲೆಲ್ಲಾ ಉಗುಳಿದ್ದಾರೆಯೆ?[8] ತಮ್ಮ ದೊಡ್ಡ ರೈತ ಕೈಗಳಿಂದ ಮತ್ತು ಮುಷ್ಟಿಗಳಿಂದ ಮುಖಕ್ಕೆ ಹೊಡೆದಿದ್ದಾರೆಯೆ?[9] ಮತ್ತು ಪುರುಷರೇ, ದೇವರ ಪದವನ್ನು ಬೋಧಿಸುವುದಕ್ಕಾಗಿ ಯಾರಾದರೂ ಎಂದಾದರೂ ನಿಮ್ಮ ಮುಖದಿಂದ ಗಡ್ಡವನ್ನು ಕಿತ್ತು ತೆಗೆದಿದ್ದಾರೆಯೆ? ಎರಡು ಅಥವಾ ಮೂರು ಇಂಚುಗಳಷ್ಟು ಉದ್ದ ಮುಳ್ಳುಗಳ ಕಿರೀಟದಿಂದ ನಿಮ್ಮ ತಲೆಯ ಸುತ್ತ ತೂತು ಮಾಡಿದ್ದಾರೆಯೆ,[10] ಅಥವಾ ನಿಮ್ಮನ್ನು ಗುರುತಿಸಲಾಗದ ಮಟ್ಟಿಗೆ, ನೀವು ಮನುಷ್ಯರು ಎಂದು ಹೇಳಲು ಸಾಧ್ಯವಾಗದಷ್ಟು ಮಟ್ಟಿಗೆ ನಿಮ್ಮನ್ನು ನುಜ್ಜು-ಗುಜ್ಜಾಗುವಷ್ಟು ಹೊಡೆದಿದ್ದಾರೆಯೆ?[11] ನಿಮ್ಮ ಕೈಗಳು ಮತ್ತು ಪಾದಗಳ ಮೂಲಕ ಶಿಲುಬೆಗೆ ಆಣಿಗಳು ಅಥವಾ ಮೊಳೆಗಳು ಎಂದಾದರೂ ಕುಟ್ಟಲ್ಪಟ್ಟಿವೆಯೆ,[12] ಅಥವಾ ಯಾರಾದರೂ ಪೋಲಿಯಿಂದ ನಿಮ್ಮ ಬದಿ ತಿವಿದಿದ್ದಾರೆಯೆ?[13] ನೀವು ಎಂದಾದರೂ ಅಣಕಿಸಲ್ಪಟ್ಟು[14] ಭೂಮಿಯ ಮೇಲಿರುವ ಅಪ್ರಯೋಜಕರಿಂದ ಶಿಲುಬೆಯ ಮೇಲೆ ಬೆತ್ತಲೆ ನೇತುಹಾಕಲ್ಪಟ್ಟಿದ್ದೀರಾ? ಮತ್ತು ಇವೆಲ್ಲವನ್ನು ಮತ್ತು ಇದಕ್ಕಿಂತ ಕೆಟ್ಟವುಗಳನ್ನು ನಿಮಗೆ, ಎಲ್ಲರೂ ಪಾಪಿಷ್ಠರಾದ ಭೂಮಿಯ ಮೇಲಿರುವ ಅಪ್ರಯೋಜಕರಿಗಾಗಿ, ಮಾಡಲಾಯಿತೆ? ಕ್ರಿಸ್ತರು ನಮ್ಮೆಲ್ಲರಿಗಾಗಿ ಇವೆಲ್ಲವನ್ನು ಮತ್ತು ಇದಕ್ಕಿಂತಲೂ ಹೆಚ್ಚಿನದ್ದನ್ನು ಮಾಡಿದರು, ಮತ್ತು ಆತ ತನ್ನ ಬದುಕಿನಲ್ಲಿ ಒಮ್ಮೆಯೂ ಪಾಪ ಮಾಡಲಿಲ್ಲ. ದೇವರ ಕೆಲಸ ಮಾಡಿದ್ದಕ್ಕೆ ಯಾರೂ ಇಂತಹ ದುಃಸ್ಥಿತಿಯನ್ನು ಪಡೆದಿಲ್ಲ.

ಪ್ರಭುವು ಸರ್ವವ್ಯಾಪಿ.[15] ಆತನ ಪವಿತ್ರಾತ್ಮದ ಮೂಲಕ ಒಂದೇ ಸಮಯದಲ್ಲಿ ಆತ ಎಲ್ಲೆಲ್ಲೂ ಇದ್ದಾರೆ. ನಿಮ್ಮ ಹೃದಯದ ಪ್ರತಿಯೊಂದು ಆಲೋಚನೆ ಮತ್ತು ಉದ್ದೇಶ ಆತನಿಗೆ ತಿಳಿದಿದೆ.[16] ನೀವು ಎಂದಾದರೂ ಮಾಡಿರುವ ಪ್ರತಿಯೊಂದು ಕೆಟ್ಟ ಪಾಪ ಮಾಡುವಾಗ ಆತ ಅಲ್ಲಿದ್ದರು. ನೀವು ಎಂದಾದರೂ ಆಲೋಚಿಸಿರಬಹುದಾದ ಪ್ರತಿಯೊಂದು ಹೊಲಸಾದ, ಕಶ್ಮಲಮಯವಾದ ಆಲೋಚನೆ ಆತನಿಗೆ ತಿಳಿದಿದೆ, ಮತ್ತು ನೀವು ಇಂದು, ಇಡೀ ದಿನ ಮತ್ತು ಇಡೀ ರಾತ್ರಿ, ಆಲೋಚಿಸುತ್ತಿರುವ ಆಲೋಚನೆಗಳು ಆತನಿಗೆ ತಿಳಿದಿವೆ. ನ್ಯಾಯವಿಚಾರಣೆಯ ದಿನ ನೀವು ಆತನನ್ನು ವಂಚಿಸಬಹುದು ಎಂದು ನೀವು ಅಂದುಕೊಂಡರೆ, ನಿಮ್ಮನ್ನು ನೀವೇ ಮರುಳುಗೊಳಿಸುತ್ತಿದ್ದೀರಿ.

*(ಪುಟ 8ರಲ್ಲಿ ಮುಂದುವರಿದಿದೆ)*

## ಕ್ಯಾಲಿಫೋರ್ನಿಯಾ

ಪ್ರೀತಿಯ ಪ್ಯಾಸ್ಟರ್ ಟೋನಿ,

ನೀವಿಲ್ಲದಿರುವುದು ನಮಗೆ ಬಹಳ ಬೇಸರ ಉಂಟುಮಾಡಿದೆ, ಮತ್ತು ಆ ಸುಳ್ಳುಗಳ ಕಂತೆಯ ಆಧಾರದ ಮೇಲೆ ನೀವು ಜೈಲಿನಲ್ಲಿರುವುದರ ಬಗ್ಗೆ ಆಲೋಚಿಸಿದಾಗ ನನಗೆ ಬಹಳ ದುಃಖವಾಗುತ್ತದೆ. ನೀವು ಒಬ್ಬ "ಒಳ್ಳೆಯ ವ್ಯವಸ್ಥಾಪಕ", ಮತ್ತು ೪೨ ವರ್ಷಗಳಿಂದ ನಾನು ನಿಮ್ಮ ಮಿನಿಸ್ಟ್ರಿಯಲ್ಲಿ ಒಂದು ಭಾಗವಾಗಿದ್ದೇನೆ ಎಂಬ ಸತ್ಯಾಂಶ ನನಗೆ ಬಹಳ ಮೆಚ್ಚುಗೆಯಾಗುತ್ತದೆ.

ಟೋನಿ, ನಾನು ಚಿಕ್ಕ ಹುಡುಗಿಯಾಗಿದ್ದಾಗ, ನನ್ನ ತಂದೆ ದುರಾಚಾರಿ ಕುಡುಕರಾಗಿದ್ದರು. ನನ್ನ ತಾಯಿಗೆ, ಬಾತುಕೊಂಡು ಆಕೆಗೆ ಪೆಟ್ಟುಗಾಯ ಆಗುವವರೆಗೆ ಆಕೆಯನ್ನು ಹೊಡೆಯುತ್ತಿದ್ದರು. ಆ ಶಬ್ದಗಳು ಮತ್ತು ನೆರಳುಗಳು ನನಗೆ ಮಾನಸಿಕ ಆಘಾತವನ್ನುಂಟುಮಾಡಿದವು. ನನ್ನ ಬದುಕಿನಲ್ಲಿ ನಡೆಯುವ ಯಾವ ಒಳ್ಳೆಯ ವಿಷಯವು ಈ ದುರಾಚಾರಗಳ ನೆರಳಿನಲ್ಲಿ ಅಡಗಿಹೋಗುತ್ತಿತ್ತು. ನನ್ನ ಹೃದಯವು ಕಹಿ ಮತ್ತು ದ್ವೇಷದಿಂದ ತುಂಬಿಹೋಗಿತ್ತು. ಎಂದೂ ಪ್ರೀತಿಸದಂತೆ ನಾನು ನನ್ನ ಹೃದಯಕ್ಕೆ ಹೇಳಿದೆ. ನಾನು ಇದರಲ್ಲಿ ನಿಪುಣೆಯಾದೆ.

ನಾನು ೧೪ ವರ್ಷದವಳಾಗಿದ್ದಾಗ, ನನ್ನ ತಂದೆ ನನ್ನ ಸಹೋದರರ ಮೇಲೆ ಮತ್ತು ನನ್ನ ಮೇಲೆ ದೌರ್ಜನ್ಯ ನಡೆಸಿದಾಗ ಮಾನಸಿಕ ಅಸ್ವಸ್ಥತೆಯೊಂದಿಗೆ ನನ್ನನ್ನು ಹೆಚ್ಚುಕಡಿಮೆ ಆಸ್ಪತ್ರೆಗೆ ಸೇರಿಸಲಾಯಿತು. ಜಗಳವು ಎಷ್ಟು ಕೆಟ್ಟದಾಗಿತ್ತು ಎಂದರೆ ಪೋಲೀಸರನ್ನು ಕರೆಯಲಾಯಿತು. ಇದನ್ನು ಬರೆಯಲು ಮತ್ತು ಇದರ ಬಗ್ಗೆ ಆಲೋಚಿಸಲು ಕಷ್ಟವಾಗುತ್ತದೆ, ಮತ್ತು ಈಗ ನನಗೆ ಕಣ್ಣೀರು ಹರಿಯುತ್ತಿದೆ.

ಟೋನಿ, ಈ ಮಿನಿಸ್ಟ್ರಿಯಲ್ಲಿ ನೀವು ಅಥವಾ ಬೇರೆ ಯಾರಾದರೂ ದುರಾಚಾರ ನಡೆಸುತ್ತಿರುವುದನ್ನು ನಾನು ಎಂದಾದರೂ ನೋಡಿದ್ದರೆ, ನನ್ನ ಹೃದಯ ಅದನ್ನು ಸಹಿಸುತ್ತಿರಲಿಲ್ಲ. ನಾನು ಇಲ್ಲಿ ಇರುತ್ತಿರಲಿಲ್ಲ. ನಿಮ್ಮ ಮತ್ತು ಸೂಸಿಯವರ ಸಾಕ್ಷ್ಯ ನನ್ನನ್ನು ಬಲಿಷ್ಠಗೊಳಿಸಿದೆ.

ನಾನು ಯುವ ಕ್ರಿಶ್ಚಿಯನ್ ಆಗಿದ್ದಾಗ, ಕೊನೆಯ ದಿನಗಳ ಬಗ್ಗೆ ನಾನು ಬೈಬಲ್ ನಲ್ಲಿ ಓದುತ್ತಿದ್ದೆ ಮತ್ತು ಅದು ನನ್ನನ್ನು ನಿಜವಾಗಿಯೂ ಚಿಂತೆಗೀಡುಮಾಡಿತ್ತು ಮತ್ತು ನಾನು ಇದರ ಬಗ್ಗೆ ಆಳವಾಗಿ ಪ್ರಾರ್ಥಿಸಿದೆನು.

ಆ ರಾತ್ರಿ, ನಾನು ಮಲಗಿದ್ದ ಬಂಕ್ ಹಾಸಿಗೆಯ ಎದುರಿನ ಒಂದು ಮಂಚದ ಮೇಲೆ ಸೂಸಿ ಕೂತಿದ್ದರು ಎಂದು ಕನಸು ಕಂಡೆನು. ಆಕೆ ಬಹಳ ಸುಂದರವಾಗಿ ಕಾಣುತ್ತಿದ್ದರು. ಸೂಸಿ ಮುಂದಕ್ಕೆ ಬಗ್ಗಿ ಮೆಲ್ಲನೆ ನನ್ನ ಹೆಸರು ಕರೆದು ನನ್ನನ್ನು ಎಬ್ಬಿಸಿದರು. ನಾನು ಮೇಲೆದ್ದು ಕೂತುಕೊಂಡೆ ಮತ್ತು ಸೂಸಿ ಮುಂದಕ್ಕೆ ಬಾಗಿ, "ನಾನು ಮತ್ತು ಟೋನಿ ಪ್ರಭುವನ್ನು ಅನುಸರಿಸುವಂತೆ ನೀನು ನಮ್ಮನ್ನು ಅನುಸರಿಸು" ಎಂದು ಹೇಳಿದರು. ಆಕೆ ನನಗೆ ಏನು ಹೇಳುತ್ತಿದ್ದಾರೆ ಎಂಬುದನ್ನು ಗ್ರಹಿಸುವ ಪ್ರಯತ್ನದಲ್ಲಿ ನಾನು ಅವರನ್ನು ನೋಡುತ್ತಿದ್ದೆ. ಆಗ ಸೂಸಿ ಪುನಃ ಹೇಳಿದರು, "ನಾನು ಮತ್ತು ಟೋನಿ ಪ್ರಭುವನ್ನು ಅನುಸರಿಸುವಂತೆ ನೀನು ನಮ್ಮನ್ನು ಅನುಸರಿಸು." ಈ ಬಾರಿ ನನಗೆ ಅರ್ಥವಾಯಿತು. ನಾನು ಸೂಸಿಗೆ ಆಯಿತು ಎಂದು ತಲೆಯಾಡಿಸಿದೆ. ನೀವು ಮತ್ತು ಸೂಸಿ ಸಂಕಟದ ಸಮಯಗಳಲ್ಲಿ ನನ್ನನ್ನು  ದಾಟಿಸುತ್ತೀರಿ ಎಂದು ತಿಳಿದು ನಿಶ್ಚಿಂತೆಯಿಂದ ಪುನಃ ಮಲಗಿದೆ.

ನೀವು ಬರೆದ "ವೆಲ್ತ್" ಎಂಬ ಸಾಹಿತ್ಯವನ್ನು ಓದುತ್ತ ಅಧ್ಯಯನ ಮಾಡುತ್ತಿರುವಾಗ ನನಗೆ ಈ ಕನಸು ನೆನಪಾಯಿತು. ಆ ಸಾಹಿತ್ಯದಲ್ಲಿ, ನೀವು ನಿಮ್ಮನ್ನು ಪರಲೋಕದಲ್ಲಿ ಕಂಡುಕೊಂಡಿರಿ, "ಬಹಳ ಬಲಿಷ್ಠ, ಅಜೇಯ, ಅತ್ಯಂತ ದೃಢ." ಈಗ ನಾನು ನಿಮ್ಮನ್ನು ಇದೇ ರೂಪದಲ್ಲಿ ನೋಡುತ್ತಿದ್ದೇನೆ. ಪರಲೋಕದ ಸಹ-ಮಾಲೀಕ ಮತ್ತು ಆತನ ರಾಜ್ಯದ ಬಾಧ್ಯಸ್ಥ.

ಪ್ಯಾಸ್ಟರ್ ಟೋನಿ, ನಾನು ಇದನ್ನು ಬರೆಯುತ್ತಿದ್ದಾಗ, ನೀವು ಹಾಡುವ ಒಂದು ಹಾಡು ನನಗೆ ನೆನಪಾಯಿತು, "ಸ್ಟ್ಯಾಂಡ್ ಬೈ ಮೀ.","ದೌ ಹೂ ರೂಲೆಸ್ಟ್ ವಿಂಡ್ ಆಂಡ್ ವಾಟರ್, ಸ್ಟ್ಯಾಂಡ್ ಬೈ ಮೀ."

ದೇವರು ನಿಯಂತ್ರಣದಲ್ಲಿದ್ದಾರೆ ಎಂದು ತಿಳಿದುಕೊಳ್ಳುವುದರಲ್ಲಿ ನನಗೆ ಬಹಳ ಸಮಾಧಾನವಾಗಿದೆ.

ಈಗಕ್ಕೆ ವಿದಾಯ,

ಸಿಸ್ಟರ್ ಆನಾ — ಕ್ಯಾನ್ಯನ್ ಕಂಟ್ರಿ, ಕ್ಯಾಲಿಫೋರ್ನಿಯಾ

---

**7** ಮತ್ತಾಯ 27:22-23, ಮಾರ್ಕ 15:13-14, ಲೂಕ 23:21, ಯೋಹಾನ 19:6 **8** ಯೆಶಾಯ 50:6, ಮತ್ತಾಯ 26:67-68, 27:30, ಮಾರ್ಕ 14:65, 15:19 **9** ಮತ್ತಾಯ 26:67-68, 27:30, ಮಾರ್ಕ 15:19, ಲೂಕ 22:63-64, ಯೋಹಾನ 19:3 **10** ಮತ್ತಾಯ 27:29, ಮಾರ್ಕ 15:17, ಯೋಹಾನ 19:2, 5 **11** ಯೆಶಾಯ 52:14 **12** ಕೀರ್ತನೆಗಳು 22:12-18, ಲೂಕ 23:33, ಯೋಹಾನನು 20:25, ಕೊಲೊಸ್ಸೆಯವರಿಗೆ 2:14 **13** ಯೋಹಾನನು 19:34 **14** ಮತ್ತಾಯ 27:29, 31, ಮಾರ್ಕ 15:20, ಲೂಕ 22:63, 23:11, 36 **15** 1 ಅರಸುಗಳು 8:27, ಕೀರ್ತನೆಗಳು 139:1-16, ಯೆರೆಮೀಯ 23:23-24, ಆಮೋಸನು 9:1-4, ಮತ್ತಾಯ 18:20, 28:20, ಅಪೋಸ್ತಲರ ಕೃತ್ಯಗಳು 17:24-27, ಎಫೆಸದವರಿಗೆ 1:23 **16** ಆದಿಕಾಂಡ 6:5-6, 1 ಪೂರ್ವಕಾಲವೃತ್ತಾಂತ 28:9, ಯೆಶಾಯ 66:18, ಮತ್ತಾಯ 15:16-20, 1 ಕೊರಿಂಥದವರಿಗೆ 3:18-21, ಇಬ್ರಿಯರಿಗೆ 4:12-13

# ಕಪ್ಪು ಆರಾಧನೆಯಂಗವಾಗಿ ಮಕ್ಕಳ ಬಲಿಯ ಆಪಾದನೆಯ ನಂತರ ಕ್ಯಾಥೊಲಿಕ್ ಜೆಸ್ಯೂಟ್ ಸುಪೀರಿಯರ್ ರಾಜೀನಾಮೆ

ಜೂಡಿ ಬ್ಯೆಯಿಂಗ್ಟನ್, ಮೇ 28, 2014



*ಮಾಜಿ ಪೋಪ್ ಜೋಸೆಫ್ ರಾಟ್ಜಿಂಗರ್ ಒಬ್ಬ ಚಿಕ್ಕ ಪ್ಯಾರಿಷನರ್ ಗೆ ಮುತ್ತು ಕೊಡುತ್ತಿರುವುದು*

ಬ್ರುಸಲ್ಸ್ ನಲ್ಲಿನ ಇಂಟರ್ನ್ಯಾಷನಲ್ ಕಾಮನ್ ಲಾ ಕೋರ್ಟ್ ಆಫ್ ಜಸ್ಟಿಸ್ ಕ್ಯಾಥೊಲಿಕ್ ಜೆಸ್ಯೂಟ್ ಮುಖಂಡ ಅಡೋಲ್ಫೊ ಪಾನ್ಯಾಚ್ಚಿನ್ ಅವರನ್ನು ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ಆಚರಣೆಗಳಿಗೆ ಸಂಬಂಧಿಸಿದಂತೆ ಆರೋಪಿಸಿದ ನಂತರ ಆತ ಈ ವಾರ ತನ್ನ ರಾಜೀನಾಮೆಯನ್ನು ಘೋಷಿಸಿದರು. ಇಂಟರ್ನ್ಯಾಷನಲ್ ಟ್ರಿಬ್ಯೂನಲ್ ಇಂಟು ಕ್ರೈಮ್ಸ್ ಆಫ್ ಚರ್ಚ್ ಆಂಡ್ ಸ್ಟೇಟ್ ನಿಂದ ನಿನ್ನೆಯ ಬುಲೆಟಿನ್ ಪ್ರಕಾರ, ಕಳೆದ ಐದು ತಿಂಗಳುಗಳಿಂದ ಐವರು ನ್ಯಾಯಾಧೀಶರು "೨೦೧೦ ರಷ್ಟು ಇತ್ತೀಚೆಗೆ ಮಕ್ಕಳ ಧಾರ್ಮಿಕ ಅತ್ಯಾಚಾರ ಮತ್ತು ಮಕ್ಕಳ ಕೊಲೆಗೆ ಪಾಚಾನ್, ಪೋಪ್ ಫ್ರಾನ್ಸಿಸ್, ಮಾಜಿ ಪೋಪ್ ರಾಟ್ಜಿಂಗರ್ ಮತ್ತು ಕ್ಯಾಂಟರ್ಬರಿಯ ಆರ್ಚ್ ಬಿಷಪ್ ಜಸ್ಟಿನ್ ವೆಲ್ಬಿ ಅವರ ಪಾತ್ರವನ್ನು ಸ್ಪಷ್ಟವಾಗಿ ಹೋಲುವ ಹಲವಾರು ಸಾಕ್ಷಿಗಳನ್ನು ಮತ್ತು ವ್ಯಾಟಿಕನ್ ಆರ್ಕೈವಲ್ ದಾಖಲೆಗಳನ್ನು ಪರೀಕ್ಷಿಸಿದ್ದಾರೆ". ಕಳೆದ ತಿಂಗಳು ಐಟಿಸಿಸಿಎಸ್, ಐದು ಅಂತಾರಾಷ್ಟ್ರೀಯ ನ್ಯಾಯಾಧೀಶರು ಮತ್ತು ೨೭ ಜ್ಯೂರಿ ಸದಸ್ಯರ ಸಮ್ಮುಖದಲ್ಲಿ ಮೊಕದ್ದಮೆ ನಡೆಸಿದರು.

"ಪೋಪ್ ಫ್ರಾನ್ಸಿಸ್ ಅವರ ಕಳೆದ ವಾರದ ಮಧ್ಯ ಪೂರ್ವ ಪ್ರವಾಸದ ಸಮಯದಲ್ಲಿ, 'ಲೈಂಗಿಕ ದುರಾಚಾರ ಸಟ್ಯಾನಿಕ್ ಮಾಸ್ ಇದ್ದಂತೆ' ಎಂಬ ಅವರ ವಿಚಿತ್ರ ಹೇಳಿಕೆಯು, ತನ್ನ ಚರ್ಚ್ ಒಳಗೆ ಮಕ್ಕಳ ಬಲಾತ್ಕಾರವು ತಾನೇ ಭಾಗವಹಿಸುವ ಸಟ್ಯಾನಿಕ್ ಧರ್ಮವಿಧಿಗಳಿಗೆ ಸಂಬಂಧಿಸಿದ್ದಾಗಿದೆ ಎಂಬುದನ್ನು ಆತ ಅರ್ಥಮಾಡಿಕೊಂಡಿದ್ದಾರೆ ಎಂದು ಬಹಿರಂಗಪಡಿಸುತ್ತದೆ" ಎಂದು ಬ್ರುಸಲ್ಸ್ ನ ಪ್ರಾಸಿಕ್ಯೂಟರ್ ಹೇಳಿದರು. "ಪೋಪರ ಹೇಳಿಕೆಗಳನ್ನು ಅಪರಾಧದ ಅನುಕ್ತ ಒಪ್ಪಿಗೆ ಮತ್ತು ಈ ಭೀಭತ್ಸ ಅಪರಾಧದಲ್ಲಿ ಆತನ ಭಾಗವಹಿಸುವಿಕೆಯ ಹೆಚ್ಚಿನ ಪುರಾವೆ ಎಂದು ನಾವು ಪರಿಗಣಿಸುತ್ತೇವೆ."

ಬ್ಲ್ಯಾಕ್ ಮಾಸ್ ಕುರಿತಾದ ಡಿಸೆಂಬರ್ ೨೫, ೧೯೬೭ರ "ಮ್ಯಾಜಿಸ್ಟೀರಿಯಲ್ ಪ್ರಿವಿಲೆಜ್" ಎಂಬ ಕ್ಯಾಥೊಲಿಕ್ ಜೆಸ್ಯೂಟ್ ಆರ್ಡರ್‌ಅನ್ನು ವ್ಯಾಟಿಕನ್ ಆರ್ಕೈವ್ಸ್ ನಿಂದ ನ್ಯಾಯಾಲಯಕ್ಕೆ ಒದಗಿಸಲಾಗಿದೆ. ನವಜಾತ ಶಿಶುಗಳ ರಕ್ತ ಕುಡಿಯುವುದು ಸೇರಿದಂತೆ, ನೈನ್ತ್ ಸರ್ಕಲ್ ಸಟ್ಯಾನಿಕ್ ಬ್ಲ್ಯಾಕ್ ಮಾಸ್ ನವಜಾತ ಶಿಶುಗಳ ಧಾರ್ಮಿಕ ಬಲಿಗಳಲ್ಲಿ ಪ್ರತಿಯೊಬ್ಬ ಹೊಸ ಪೋಪ್ ಭಾಗವಹಿಸಬೇಕಾಗಿತ್ತು ಎಂಬುದನ್ನು ಆ ದಸ್ತಾವೇಜು ತೋರಿಸುತ್ತದೆ ಎಂದು ಹೇಳಲಾಗಿದೆ.

"ಹಲವಾರು ಶತಮಾನಗಳಿಂದ ಜೆಸ್ಯೂಟರ ಬಳಿ ಅಪಹರಿಸಿದ ನವಜಾತ ಶಿಶುಗಳನ್ನು ಧಾರ್ಮಿಕವಾಗಿ ಕೊಲೆಗೈದು ಅವರ ರಕ್ತ ಕುಡಿಯಲು ಪೂರ್ವನಿರ್ಧರಿತ ಯೋಜನೆ ಇತ್ತು ಎಂಬುದನ್ನು ವ್ಯಾಟಿಕನ್ ದಸ್ತಾವೇಜುಗಳು ಸ್ಪಷ್ಟವಾಗಿ ಸೂಚಿಸುತ್ತವೆ," ಎಂದು ಮುಖ್ಯ ಪ್ರಾಸಿಕ್ಯೂಟರ್ ಹೇಳಿದರು. ಮುಗ್ಧರ ಜೀವರಕ್ತದಿಂದ ಆಧ್ಯಾತ್ಮಿಕ ಶಕ್ತಿಯನ್ನು ಪಡೆದು ರೋಮ್ ನಲ್ಲಿ ಪೋಪ್ ಪ್ರಭುತ್ವದ ರಾಜಕೀಯ ಸ್ಥಿರತೆಯನ್ನು ಖಚಿತಪಡಿಸುವ ವಿಕೃತ ಭಾವನೆಯಿಂದ ಈ ಯೋಜನೆ ಹುಟ್ಟಿದೆ. ಈ ಕೃತ್ಯಗಳು ಕೇವಲ ಜನಹತ್ಯೆಗೆ ಸಂಬಂಧಿಸಿವೆ, ಮಾತ್ರವಲ್ಲದೆ ಸ್ವಭಾವದಲ್ಲಿ ವ್ಯವಸ್ಥಿತವಾಗಿವೆ ಮತ್ತು ಸಂಸ್ಥಾವಲಂಬಿಯಾಗಿವೆ. ಕನಿಷ್ಠಪಕ್ಷ ೧೭೭೩ರಿಂದ, ಅವು ರೋಮನ್ ಕ್ಯಾಥೊಲಿಕ್ ಚರ್ಚ್, ಜೆಸ್ಯೂಟರು ಮತ್ತು ಪ್ರತಿಯೊಬ್ಬ ಪೋಪ್ ನಿಂದ ಮಾಡಲ್ಪಟ್ಟಿರುವಂತೆ ತೋರುತ್ತವೆ."

"ಸಟ್ಯಾನಿಕ್ ಬ್ಲ್ಯಾಕ್ ಮಾಸ್ ಗಳ ಬಗ್ಗೆ ಪೋಪರ ಹೇಳಿಕೆಗಳು ಅತ್ಯಂತ ನೀಚ ರೀತಿಯ ಹಿಂಸಾನಂದದ ಅಸಂವೇದನೆಯಾಗಿವೆ," ಎಂದು ಕ್ಯಾಥೊಲಿಕ್ ಸಟ್ಯಾನಿಕ್ ಬ್ಲ್ಯಾಕ್ ಮಾಸ್ ಚಿತ್ರಹಿಂಸೆಯನ್ನು ಅನುಭವಿಸಿರುವರೆಂದು ಹೇಳಿಕೊಳ್ಳುವ ೫೧ ವರ್ಷದ ಅಮೇರಿಕನ್ ರೂತ್ ಲಿಯೊಪೋಲ್ಡ್ ಸಮ್ಮತಿ ಸೂಚಿಸಿದರು. "'ಸಟ್ಯಾನಿಕ್ ಮಾಸ್' ನಂಥ ಟ್ರಿಗರ್ ಪದಗಳನ್ನು ಹೇಳುವುದೂ ಕೂಡ ಸಟ್ಯಾನಿಕ್ ಚಿತ್ರಹಿಂಸೆಯನ್ನು ಅನುಭವಿಸಿದವರನ್ನು ಪುನಃ ಆಘಾತಗೊಳಿಸುತ್ತದೆ ಎಂದು ಯಾವ ದಡ್ಡನಿಗೂ ತಿಳಿದಿದೆ. ನಾವು ಆತನ ಮೇಲೆ ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕೊಲೆಗಳಲ್ಲಿ ಪಾಲ್ಗೊಳ್ಳುವಿಕೆಯ ಆಪಾದನೆಯನ್ನು ಹೊರಿಸುತ್ತಿರುವುದರಿಂದ ಆತನ ಪದಗಳನ್ನು ಉದ್ದೇಶಪೂರ್ವಕವಾಗಿ ರಚಿಸಲಾಗಿರಬಹುದು. ಆತ ಅಧಿಕಾರಬಿಟ್ಟುಕೊಡುವ ಸಮಯ ಬಂದಿದೆ."

ಲಿಯೊಪೋಲ್ಡ್ ಅವರ ಅಗೇನ್ಸ್ಟ್ ಚರ್ಚ್ ಟೆರರ್ ಬದುಕುಳಿದಿರುವವರ ಜಾಲ ಬ್ರುಸಲ್ಸ್ ನ್ಯಾಯಾಲಯಕ್ಕೆ ಸಾಕ್ಷಿದಾರರ ನಿಯೋಗ ಒಂದರ ನಾಯಕತ್ವ ವಹಿಸಿತ್ತು. ೨೦೧೪ರ ನ್ಯಾಯಾಲಯ, ಪೋಪ್ ಫ್ರಾನ್ಸಿಸ್, ಪಾಚಾನ್ ಮತ್ತು ವೆಲ್ಬಿ ಸೇರಿರುವರು ಎಂದು ಹೇಳಲಾದ ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ನ ಜಾಗತಿಕ ಗಣ್ಯ ಸದಸ್ಯರ ಮೇಲೆ ಕಾನೂನುಕ್ರಮ ಜರುಗಿಸುತ್ತಿತ್ತು. ಪೋಪ್ ಫ್ರಾನ್ಸಿಸ್, ಮಾಜಿ ಪೋಪ್ ರಾಟ್ಜಿಂಗರ್ ಅಥವಾ ಪಾನ್ಯಾಚ್ಚಿನ್, ತಾವು ಮಕ್ಕಳಾಗಿದ್ದಾಗ ಮಕ್ಕಳ ಬಲಿಗಳಲ್ಲಿ ಹಾಜರಿದ್ದರು ಎಂದು ಕನಿಷ್ಠ ಎಂಟು ಸಾಕ್ಷಿಗಳು ಸಾಕ್ಷಿ ಹೇಳಿದ್ದಾರೆ.

ನೈನ್ತ್ ಸರ್ಕಲ್ ಚಟುವಟಿಕೆಗಳನ್ನು ಮರೆಮಾಚಲು ಪೋಪ್ ಫ್ರಾನ್ಸಿಸ್ ಅವರ ಪ್ರಯತ್ನಗಳು ಮತ್ತು ಅವರು "ಗುಟ್ಟಿನಲ್ಲಿ ನ್ಯಾಯಾಲಯಕ್ಕೆ ಅಡ್ಡಿಪಡಿಸಲು ಪ್ರಯತ್ನಿಸಿದರು" ಎಂದು ವಿವರಿಸಿದ ವ್ಯಾಟಿಕನ್ ಮೂಲಗಳಿಂದ ನ್ಯಾಯಾಲಯವು ಹೊಸ ಪುರಾವೆ ಪಡೆದಿದೆ ಎಂದು ೨೭ ರ ಐಟಿಸಿಸಿಎಸ್ ಬುಲೆಟಿನ್ ಪ್ರಕಟಿಸಿತು.

ಪಾಚಾನ್ ಅಧಿಕಾರ ಬಿಟ್ಟುಕೊಡಲು ನಿರ್ಧರಿಸಿದಾಗ, ಪೋಪ್ ಫ್ರಾನ್ಸಿಸ್, ತಾನು ಪೋಪ್ ರಾಟ್ಜಿಂಗರ್ ಅವರ ಉದಾಹರಣೆಯನ್ನು ಅನುಸರಿಸಿ ನಿವೃತ್ತಿ ಹೊಂದಬಹುದು ಎಂದು ಪವಿತ್ರ ಭೂಮಿಯ ಅವರ ಇತ್ತೀಚಿನ ಪ್ರವಾಸದ ಸಮಯದಲ್ಲಿ ವರದಿಗಾರರಿಗೆ ಸೂಚನೆ ನೀಡಿದರು. ಫೆಬ್ರುವರಿ ೧೫, ೨೦೧೩ರಂದು, ಬ್ರುಸಲ್ಸ್ ನ್ಯಾಯಾಲಯ ರಾಟ್ಜಿಂಗರ್ ಅವರನ್ನು ಮಾನವೀಯತೆಯ ವಿರುದ್ಧ ಅಪರಾಧಗಳನ್ನು ಮಾಡಿದ್ದಾರೆಂದು ತೀರ್ಪು ನೀಡಿತು. ಕೆಲವು ದಿನಗಳ ನಂತರ ಫೆಬ್ರುವರಿ ೨೮ರಂದು ಅವರು ರಾಜೀನಾಮೆ ನೀಡಿದರು. ಆ ೨೦೧೩ರ ನ್ಯಾಯಾಲಯದಲ್ಲಿ ಪ್ರಸ್ತುತಪಡಿಸಲಾದ ಪುರಾವೆಯನ್ನು ಕೆವಿನ್ ಆನೆಟ್ ಅವರ "ಹಿಡನ್ ನೋ ಲಾಂಗರ್" ಅಲ್ಲಿ ಕಾಣಬಹುದು ಮತ್ತು ಇಲ್ಲಿ ಉಚಿತವಾಗಿ ಲಭ್ಯವಿದೆ: hiddennolonger.com

ನೆದರ್ಲ್ಯಾಂಡ್ಸ್ ನ ಡಚ್ ಕ್ಯಾಥೊಲಿಕ್ ಕಾರ್ಡಿನಲ್ ಆಲ್ಫ್ರಿಂಕ್ ಮತ್ತು ಪ್ರಿನ್ಸ್ ಬರ್ನಾರ್ಡ್; ರಾಣಿ ಎಲಿಜಬೆತ್, ಪ್ರಿನ್ಸ್ ಫಿಲಿಪ್, ಡಚ್ ಮಹಾರಾಣಿ ವಿಲ್ಹೆಮೀನ, ಆಕೆಯ ಕುಟುಂಬ ಮತ್ತು ಸಂಗಾತಿ ಮಹಾರಾಜ ಹೆಂಡ್ರಿಕ್ ಸೇರಿದಂತೆ ಬ್ರಿಟಿಷ್, ಡಚ್ ಮತ್ತು ಬೆಲ್ಜಿಯನ್ ರಾಜ ಕುಟುಂಬ; ಪೋಪ್ ಫ್ರಾನ್ಸಿಸ್, ಮಾಜಿ ಪೋಪ್ ರಾಟ್ಜಿಂಗರ್, ಕ್ಯಾಂಟರ್ಬರಿಯ ಆರ್ಚ್ ಬಿಷಪ್ ಜಸ್ಟಿನ್ ವೆಲ್ಬಿ, ನ್ಯಾಯಾಧೀಶರಾದ ಫುಲ್ಫೋರ್ಡ್ ಸೇರಿದಂತೆ ಇಬ್ಬರು ಬ್ರಿಟಿಷ್ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು, ಒಬ್ಬ ಕೆನೇಡಿಯನ್ ಕ್ಯಾಥೊಲಿಕ್ ಬಿಷಪ್ ಮತ್ತು ಬೆಲ್ಜಿಯಂ ಮತ್ತು ಇಂಗ್ಲೆಂಡ್ ನಲ್ಲಿ ಹಿರಿಯ ಸರ್ಕಾರಿ ಸಚಿವರನ್ನು ಸಾಕ್ಷಿಗಳು ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ಸದಸ್ಯರು ಎಂದು ಹೆಸರಿಸಿದರು.

ಕಳೆದ ವಾರ, ಕ್ಯಾನಡದ ಮಾಂಟ್ರಿಯಲ್ಲಿನಲ್ಲಿರುವ ಮಾರೀ-ರೇನ್-ಡ್ಯೂ-ಮಾಂಡ್ ರೋಮನ್ ಕ್ಯಾಥೊಲಿಕ್ ಕೆಥೆಡ್ರುಲ್ ನ ಕೆಳಗಿರುವ ಗುಪ್ತ ನೆಲಮಾಳಿಗೆಯಲ್ಲಿ ಆಗಸ್ಟ್ ೧೫, ೨೦೧೪ಕ್ಕೆ ನೈನ್ತ್ ಸರ್ಕಲ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ಒಂದು ಮಕ್ಕಳ ಬಲಿಯನ್ನು ಆಯೋಜಿಸಿದೆ ಎಂಬ ಸುದ್ದಿ ಪಡೆದ ನಂತರ ನ್ಯಾಯಾಲಯವು ಕೆಲವು ದಿನಗಳ ಕಾಲ ಮೊಕದ್ದಮೆಯನ್ನು ಮುಂದೂಡಿತು. ವೇಲ್ಸ್ ನ ಕೇರ್ನಫಾನ್ ಕ್ಯಾಸಲ್ ನ ನೆಲಮಾಳಿಗೆಯಲ್ಲಿ, ಕೆನೇಡಿಯನ್ ಬ್ರ್ಯಾಂಟನ್ ಒಂಟಾರಿಯೊ ಮೊಹಾಕ್ ಇಂಡಿಯನ್ ವಸತಿ ಶಾಲೆಯ ಪಶ್ಚಿಮ ಪಾರ್ಶ್ವದಡಿಯ ಉಪ ನೆಲಮಾಳಿಗೆಯ ಸಮಾಧಿಗೂಡಿನಲ್ಲಿ ಮತ್ತು ಫ್ರಾನ್ಸ್, ಹಾಲೆಂಡ್ ಮತ್ತು ಯುಎಸ್ ಗಳಲ್ಲಿರುವ ತೋಪುಗಳಲ್ಲಿ ಮಕ್ಕಳ ಬಲಿಗಳನ್ನು ನೋಡಲು ಮಕ್ಕಳಾಗಿದ್ದಾಗ ತಮ್ಮನ್ನು ಬಲವಂತಪಡಿಸಲಾಗುತ್ತಿತ್ತು ಎಂದೂ ಕೂಡ ಸಾಕ್ಷಿಗಳು ಸಾಕ್ಷಿ ಹೇಳಿದರು.

ಕೆಲವರು ಈ ಜಾಗತಿಕ ಗಣ್ಯ ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ನ ಇನ್ನೂ ಇತ್ತೀಚಿನ ದೌರ್ಜನ್ಯಕ್ಕೆ ಒಳಗಾದವರಿದ್ದಾರೆ. ಹತ್ತು ಸ್ಥಳೀಯ ಮಕ್ಕಳ ಅಪಹರಣಕ್ಕಾಗಿ ರಾಣಿ ಎಲಿಜಬೆತ್ ರ ಅರೆಸ್ಟ್ ವಾರೆಂಟ್ ಬಗ್ಗೆ ಪ್ರಶ್ನೆಗಳನ್ನು ಕೇಳಿದ ಕಾರಣಕ್ಕೆ ಜಮೈಕನ್ ಮತ್ತು ಬ್ರಿಟಿಷ್ ಸೈನಿಕ ವಿವಿಯನ್ ಕನಿಂಘ್ಯ-

ಮ್ ಗೆ ನಿದ್ದೆ ಬರಿಸುವ ವಸ್ತು ಕೊಟ್ಟು ಇಂಗ್ಲೆಂಡ್ ನ ಸ್ಟ್ಯಾಫರ್ಡ್ ನ ಸೇಂಟ್ ಜಾರ್ಜಸ್ ಹಾಸ್ಪಿಟಲ್ಲಿನಲ್ಲಿ (ದೂರವಾಣಿ: ೪೪ ೦೧೭೮೫ ೨೫೭೮೮೮) ದಾಖಲಿಸಲಾಗಿದೆ. ರಾಣಿ ಎಲಿಜಬೆತ್ ರ ಅರೆಸ್ಟ್ ವಾರೆಂಟನ್ನು ಕ್ಯಾಥೊಲಿಕ್ ಚರ್ಚಿನಲ್ಲಿ ಪೋಸ್ಟ್ ಮಾಡಿದ್ದಕ್ಕಾಗಿ ಬ್ರಿಟಿಷ್ ಪೌರ ಡೇವಿಡ್ ಕಾಂಪನ್ ಮತ್ತು ಆತನ ಹೆಂಡತಿಗೆ ನಿದ್ದೆ ಬರಿಸುವ ವಸ್ತು ಕೊಟ್ಟು, ಬಂಧಿಸಿ ಲಂಡನ್ ಪಾರ್ಕ್ ರಾಯಲ್ ಮೆಂಟಲ್ ಹೆಲ್ತ್ ಸೆಂಟರಿನಲ್ಲಿ ಕೂಡಿಹಾಕಲಾಯಿತು. ಕಾಂಪನ್ ಅವರ ಬಂಧನ ಮತ್ತು ಬಿಡುಗಡೆಯನ್ನು ಈ ವಿಡಿಯೊದಲ್ಲಿ ಸೆರೆಹಿಡಿಯಲಾಯಿತು:
https://www.youtube.com/watch?v=asxvy೪SxK೪s

ಕಳೆದ ಅಕ್ಟೋಬರಿನಲ್ಲಿ ಕ್ಯಾನಡದ ಒಂಟಾರಿಯೊದ ಕಿಚನರ್ ನಲ್ಲಿ ರಾಣಿ ಎಲಿಜಬೆತ್ ಮೇಲಿನ ಅಪಹರಣ ಆರೋಪಗಳು/ಅಪರಾಧ ನಿರ್ಣಯ ಸೇರಿದಂತೆ ಕಾಣೆಯಾದ ೫೦,೦೦೦ ಸ್ಥಳೀಯ ಮಕ್ಕಳ ಬಗೆಗಿನ ೨೦೧೩ ನೈನ್ತ್ ಸರ್ಕಲ್ ಸಟ್ಯಾನಿಕ್ ಕಲ್ಟ್ ಪ್ರಕರಣವನ್ನು ಬಹಿರಂಗಪಡಿಸಲು ಸ್ಟೀವ್ ಫಿನ್ನಿ ಪ್ರಯತ್ನಿಸುತ್ತಿದ್ದರು. ಫಿನ್ನಿಯನ್ನು ಬಂಧಿಸಿ ಮೂರು ದಿನಗಳ ವರೆಗೆ ಆರೋಪ ಹೊರಿಸದೆ ಜೈಲಿನಲ್ಲಿಡಲಾಯಿತು. ಜಗತ್ತಿನೆಲ್ಲೆಡೆ ಐಟಿಸಿಸಿಎಸ್ ಆಯೋಜಿಸಿದ ಪ್ರತಿಭಟನೆಗಳು ಫಿನ್ನಿಯವರ ಮತ್ತು ಕ್ಯಾಂಪನ್ ರವರ ಬಿಡುಗಡೆಗಳಲ್ಲಿ ಪರಿಣಾಮಕಾರಿಯಾದಂತೆ ತೋರಿತು.

ಮಾಜಿ ಕಾಮ್ಲೂಪ್ಸ್ ಸ್ಕೂಲ್ ನಿವಾಸಿ ವಿಲಿಯಮ್ ಕೋಂಬ್ಸ್ ಮತ್ತು ಇತರರು ಇಷ್ಟು ಅದೃಷ್ಟಶಾಲಿಗಳಾಗಿರಲಿಲ್ಲ. ಆ ಕೆನೇಡಿಯನ್ ಸ್ಥಳೀಯರು, ರಾಣಿ ಎಲಿಜಬೆತ್ ಮತ್ತು ಪ್ರಿನ್ಸ್ ಫಿಲಿಪ್ ತನ್ನ ಹತ್ತು ಗೆಳೆಯರು ಮತ್ತು ಸಹ ಕಾಮ್ಲೂಪ್ಸ್ ನಿವಾಸಿಗಳೊಂದಿಗೆ ಶಾಲೆಯಿಂದ ಹೋಗುವುದನ್ನು ನೋಡಿದುದರ ಬಗ್ಗೆ ಮಾತನಾಡಿದ ಒಂದು ೨೦೧೦ರ ರೇಡಿಯೊ ಸಂದರ್ಶನದ ನಂತರ ಆತನಿಗೆ ಕೋಮಾಗೆ ಹೋಗುವಂತೆ ಚುಚ್ಚುಮದ್ದು ನೀಡಿ ನಂತರ ಆತ ಸತ್ತರು. ಚೀಫ್ ಲೂಯಿಸ್ ಡೇನಿಯಲ್ಸ್, ಹ್ಯಾರಿಯೆಟ್ ನಹಾನೀ, ಜಾನಿ ಬಿಂಗೊ ಡಾಸನ್ ಮತ್ತು ರಿಕಿ ಲ್ಯಾವಿಲೀ ಕೂಡ ಕಾಣೆಯಾದ ೫೦,೦೦೦ ಸ್ಥಳೀಯ ಮಕ್ಕಳ ಕುರಿತಾದ ೨೦೧೩ ಅಂತಾರಾಷ್ಟ್ರೀಯ ವಿಚಾರಣೆಯಲ್ಲಿ ನಿಗದಿಪಡಿಸಲಾದ ಸಾಕ್ಷ್ಯ ಪ್ರಸ್ತುತಿಗಳಿಗಿಂತ ಮೊದಲೆ ರಹಸ್ಯಮಯ ಕಾರಣಗಳಿಂದಾಗಿ ಸಾವನ್ನಪ್ಪಿದರು.

ನೈನ್ತ್ ಸರ್ಕಲ್ ಸಟ್ಯಾನಿಕ್ ಚೈಲ್ಡ್ ಸ್ಯಾಕ್ರಿಫೈಸ್ ಕಲ್ಟ್ ನ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಪುರಾವೆಯನ್ನು ಐಸಿ ಎಲ್ ಸಿ ಜೆ ಕೋರ್ಟ್ ಪ್ರಾಸಿಕ್ಯೂಟರ್ಸ್ ಆಫೀಸಿನಿಂದ ಮುಂಬರುವ ಸಾರ್ವಜನಿಕ ಮಾಹಿತಿ ಲಘು ವರದಿಗಳಲ್ಲಿ ನೀಡುವುದಾಗಿ ಭರವಸೆ ನೀಡಲಾಗಿದೆ. ಮುಂದೆ ಬರುತ್ತಿರುವ ಸಾಕ್ಷಿಗಳ ಸಂಖ್ಯೆ ಮತ್ತು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಪ್ರಸ್ತುತಪಡಿಸಲಾಗಿರುವ ಪುರಾವೆಯ ಕಾರಣ ಮೊಕದ್ದಮೆಯ ವಿಚಾರಣೆಯು ಪೂರ್ಣಗೊಳ್ಳಲು ಒಂದು ವರ್ಷಕ್ಕಿಂತ ಹೆಚ್ಚು ಸಮಯ ಬೇಕಾಗಬಹುದಾದ ನಿರೀಕ್ಷೆ ಇತ್ತು. ಬ್ರುಸಲ್ಸ್ ನಲ್ಲಿ ಅಂತಾರಾಷ್ಟ್ರೀಯ ನ್ಯಾಯಾಲಯದ ಅಧಿಕಾರಿಗಳನ್ನು ಸಂಪರ್ಕಿಸಲು ಇಲ್ಲಿಗೆ ಇ-ಮೇಲ್ ಮಾಡಿ ಅಥವಾ ಕರೆ ಮಾಡಿ:
hiddenfromhistory೧@gmail.com, info@iclcj.com, admin@iclcj.com, ೨೫೦-೫೯೧-೪೫೭೩, ೩೮೬-೩೨೩-೫೭೭೪
http://childabuserecovery.com/catholic-jesuit-superior-resigns-after-charged-with-black-mass-child-sacrifices/#.U೪Y೯gyimU೧J

## ಭಾರತ

ಕ್ರಿಸ್ತರಲ್ಲಿ ನನ್ನ ಪ್ರಿಯ ಸಹೋದರನೇ,

ಯೇಸುವಿನ ಹೆಸರಿನಲ್ಲಿ ನಿಮಗೆಲ್ಲರಿಗೂ ನಮಸ್ಕಾರಗಳು. ನಿಮಗಾಗಿ ಮತ್ತು ನಿಮ್ಮ ಸುಂದರ ಮಿನಿಸ್ಟ್ರಿಗಾಗಿ ನಾನು ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ. ಬೈಬಲ್ಲಿಗೆ ಸಂಬಂಧಿಸಿದ ಸಾಹಿತ್ಯವನ್ನು ಕಳುಹಿಸಿರುವುದಕ್ಕಾಗಿ ನಿಮಗೆ ಧನ್ಯವಾದಗಳು. ವಿತರಣೆಯ ನಂತರ, ನಾವು ಎಲ್ಲಾ ಓದುಗರಿಂದ ಪ್ರತಿಕ್ರಿಯೆಗಳನ್ನು ಪಡೆಯುತ್ತಿದ್ದೇವೆ. ನಿಜವಾಗಿಯೂ, ನನ್ನ ಹೃದಯಕ್ಕೆ ಆಶ್ಚರ್ಯವಾಗಿದೆ ಮತ್ತು ನಾನು ಒಂದು ಅದ್ಭುತ ಬದಲಾವಣೆಯನ್ನು ನೋಡಿದ್ದೇನೆ.

ಎಲ್ಲಾ ಓದುಗರು ನನ್ನಲ್ಲಿಗೆ ಬಂದು ಅವುಗಳನ್ನು ಕೇಳುತ್ತಿದ್ದಾರೆ. ನಮ್ಮ ಕಳೆದ ಆರಾಧನಾ ಸಭೆಯಲ್ಲಿ ಅನೇಕರು ಕ್ರಿಸ್ತರಿಗೆ ತಮ್ಮ ಬದುಕನ್ನು ಒಪ್ಪಿಸಿದರು. ಹಲವಾರು ಜನರು ನಿಮ್ಮ ಮತ್ತು ದೇವರ ಒಳ್ಳೆಯತನದ ಬಗ್ಗೆ ತಮ್ಮ ಸಾಕ್ಷ್ಯಗಳನ್ನು ನೀಡಿದರು.

ನಿಮ್ಮ ಪವಿತ್ರೀಕೃತ ಸಾಹಿತ್ಯಗಳನ್ನು ಓದಿದ ನಂತರ ಕೆಲವು ಹಿಂದೂ ಜನರು ನಮ್ಮನ್ನು ಸೇರಿದ್ದನ್ನು ನೋಡಿ ನನಗೆ ಸಂತೋಷವಾಗಿದೆ. ಅವರು ಹಿಂದೂ ಸಮುದಾಯದವರು.

ಕ್ರಿಸ್ತರಿಗೆ ತಮ್ಮ ಬದುಕನ್ನು ಒಪ್ಪಿಸಿರುವ ಹೊಸ ಜನರಿಗಾಗಿ ದಯವಿಟ್ಟು ನನಗೆ ಕೆಲವು ತೆಲುಗು ಸಾಹಿತ್ಯವನ್ನು ಮತ್ತು ಕೆಲವು ತೆಲುಗು ಬೈಬಲ್ ಗಳನ್ನು ಕಳುಹಿಸಿ. ಈ ಬುಡಕಟ್ಟು ಪ್ರದೇಶದಲ್ಲಿ, ಮತ್ತು ಅನಾಥ ಮಕ್ಕಳ ಮನೆಯ ಸೇವೆಯಲ್ಲಿ ನನ್ನ ಕೆಲಸಕ್ಕಾಗಿ ದಯವಿಟ್ಟು ಪ್ರಾರ್ಥಿಸಿ. ನಮಗಾಗಿ ದಯವಿಟ್ಟು ಪ್ರಾರ್ಥಿಸಿ. ನಮ್ಮ ಶ್ರೇಷ್ಠ ಜಗತ್ತಿನಾದ್ಯಂತ ಮಿನಿಸ್ಟ್ರಿಗಾಗಿ ನಾವೆಲ್ಲರೂ ಪ್ರಾರ್ಥಿಸುತ್ತಿದ್ದೇವೆ. ಅನೇಕ ಕಳೆದುಹೋದ ಆತ್ಮಗಳನ್ನು ರಕ್ಷಿಸಲು ದೇವರು ನಿಮ್ಮ ಮೂಲಕ ಲೋಕದಲ್ಲೇ ಅತ್ಯಂತ ಶ್ರೇಷ್ಠ ಕೆಲಸ ಮಾಡುತ್ತಿದ್ದಾರೆ. ನಮ್ಮ ಪ್ರಭುವಾದ ದೇವರು ನಿಮಗೆ ಹೆಚ್ಚು ಶಕ್ತಿ ನೀಡಲಿ ಮತ್ತು ನೀವು ಮಾಡುವ ಕೆಲಸಕ್ಕಾಗಿ ಸಮೃದ್ಧವಾಗಿ ಆಶೀರ್ವದಿಸಲಿ. ಬಹಳ ಧನ್ಯವಾದಗಳು.

ಆತನ ಕೊಯ್ಲಿನಲ್ಲಿ ಹೃತ್ಪೂರ್ವಕವಾಗಿ
ನಿಮ್ಮ ಸಹ-ಕಾರ್ಯಕರ್ತ,
ಕಟ್ಟಿಲ ರಾವ್
ಉಂಡ್ರುಜಾವರಂ ಮಂಡಲ್, ಎ.ಪಿ., ಭಾರತ

## ನೈಜೀರಿಯ


ಪ್ರೀತಿಯ ಪ್ಯಾಸ್ಟರ್ ಅಲಾಮೊ ಮತ್ತು ಸಂಗಡಿಗರೇ,

ಬೇಗನೆ ಬರಲಿರುವ ನಮ್ಮ ಅರಸನಾದ ಪ್ರಭು ಯೇಸು ಕ್ರಿಸ್ತರ ಹೆಸರಿನಲ್ಲಿ ನಿಮಗೆ ಕ್ಯಾಲ್ವಾರಿ ನಮಸ್ಕಾರಗಳು. ಹಿಂದೆ ನಾನು ಒಬ್ಬ ಮಾದರಿ ಮುಸ್ಲಿಮ್ ಆಗಿದ್ದೆನು, ಜನರನ್ನು ಇಸ್ಲಾಮಿಕ್ ಧರ್ಮದತ್ತ ಒಯ್ಯುತ್ತಿದ್ದೆನು. ಇಗೊಡಾನ್ ಲೀಸ ಪಟ್ಟಣದಲ್ಲಿ, ಕೆಲವು ದೇವರ ಜನರು ನಡೆಸುತ್ತಿದ್ದ ದಂಡಯಾತ್ರೆಯಲ್ಲಿ ನಾನು ಹಾಜರಿದ್ದೆ ಮತ್ತು ಅವರು ನನಗೆ ನಿಮ್ಮ ಕೆಲವು ಸುದ್ದಿಪತ್ರಿಕೆಗಳನ್ನು ಕೊಟ್ಟರು. ನಿಮ್ಮ ಸಾಹಿತ್ಯವನ್ನು ಓದುವ ಮೂಲಕ ಅದು ನನ್ನ ಮನ ಮುಟ್ಟಿತು ಮತ್ತು ನಾನು ಯೇಸು ಕ್ರಿಸ್ತರನ್ನು ನನ್ನ ಪ್ರಭು ಮತ್ತು ವೈಯಕ್ತಿಕ ರಕ್ಷಕರನ್ನಾಗಿ ಪಡೆದೆನು.

ನಾನು ಈಗ ಕ್ರಿಶ್ಚಿಯನ್ ಬೈಬಲ್ ಫೆಲೊಷಿಪ್ಪಿನ ಒಬ್ಬ ಸದಸ್ಯನಾಗಿದ್ದೇನೆ, ಮತ್ತು ಜೀವಂತ ದೇವರ ಪದಗಳನ್ನು ಮುಸ್ಲಿಮರಾದ ನನ್ನ ಕೆಲವು ಗೆಳೆಯರೊಂದಿಗೆ ಮತ್ತು ಬೈಬಲ್ ಕ್ಲಬ್ ಇಲ್ಲದಿರುವ ಕೆಲವು ಶಾಲೆಗಳಲ್ಲಿ ಹಂಚಿಕೊಳ್ಳಲು ಪ್ರಾರಂಭಿಸಿದ್ದೇನೆ. ಆ ಇಸ್ಲಾಮಿಕ್ ಶಾಲೆಗಳ ಪೈಕಿ ಆರು ಶಾಲೆಗಳಲ್ಲಿ ಶಿಕ್ಷಕರು ಬೈಬಲ್ ಕ್ಲಬ್ಬುಗಳನ್ನು ರಚಿಸಲು ಜೊತೆಗೂಡಿದ್ದಾರೆ. ಇತರ ಶಾಲೆಗಳಿಗೆ ಹೋಗಿ ಕ್ರಿಸ್ತ ಯೇಸು ಮತ್ತು ರಕ್ಷಣೆಯ ಬಗ್ಗೆ ಬೋಧಿಸಲು ನಾವು ವಿಶ್ವಾಸಾರ್ಹ ಏಳು ಜನರ ತಂಡವೊಂದನ್ನು ಸಂಯೋಜಿಸಿದ್ದೇವೆ, ಮತ್ತು ಅವರು ತಮ್ಮ ಶಾಲೆಗಳಲ್ಲಿ ಕ್ಲಬ್ ಗಳನ್ನು ರಚಿಸಲು ಕೂಡ ಪ್ರಯತ್ನಿಸುತ್ತಾರೆ. ಆಫ್ರಿಕಾದಲ್ಲಿರುವ ನಾವು ಹೆಚ್ಚಿನವರು ಬಡವರು. ಆದ್ದರಿಂದ ಈ ಕೆಲಸವನ್ನು ವಿಸ್ತರಿಸಲು ಕೆಲವು ಸಾಮಗ್ರಿಗಳನ್ನು, ವಿಶೇಷವಾಗಿ ಬೈಬಲ್ ಗಳು ಮತ್ತು ನಿಮ್ಮ ವಿವಿಧ ಬಗೆಯ ಸಾಹಿತ್ಯವನ್ನು, ಬೇಕಾದವರಿಗೆ ಹಂಚಲು, ನಮಗೆ ಕಳುಹಿಸಲು ನಾವು ನಿಮ್ಮಲ್ಲಿ ಶ್ರದ್ಧಾಪೂರ್ವಕವಾಗಿ ಬೇಡಿಕೊಳ್ಳುತ್ತಿದ್ದೇವೆ. ಸುವಾರ್ತೆಯನ್ನು ಬೋಧಿಸಲು ಮತ್ತು ಕ್ರಿಸ್ತರಿಗಾಗಿ ಕಳೆದುಹೋದ ಆತ್ಮಗಳನ್ನು ಗೆಲ್ಲಲು ನಮಗೆ ನೆರವಾಗುವ, ಸಾಧ್ಯವಾದ ಪ್ರತಿಯೊಂದು ವಸ್ತುವನ್ನು ನಮಗೆ ಕಳುಹಿಸಲು ಅನುಗ್ರಹದ ಪ್ರಭುವು ನಿಮಗೆ ಸೌಕರ್ಯ ಒದಗಿಸುತ್ತಾರೆ ಎಂದು ನಾನು ಪ್ರಾರ್ಥಿಸುತ್ತೇನೆ. ಕ್ಲಬ್ ನ ನಾಯಕರಿಗಾಗಿ ಕನಿಷ್ಠ ಹದಿನಾರು ಬೈಬಲ್ ಗಳು ಮತ್ತು ನಿಮಗೆ ಕಳುಹಿಸಲು ಸಾಧ್ಯವಾಗುವಷ್ಟು ಸಾಹಿತ್ಯವನ್ನು ಕಳುಹಿಸಿ ದಯವಿಟ್ಟು ನಮ್ಮ ಕ್ಲಬ್‌ಅನ್ನು ಆಶೀರ್ವದಿಸಿ.

ದೇವರು ನಿಮಗೆ ಮತ್ತು ನಿಮ್ಮ ಮಿನಿಸ್ಟ್ರಿಗೆ ಅನುಗ್ರಹ ತೋರಲಿ. ದಯವಿಟ್ಟು ನಮ್ಮ ಹೆಸರನ್ನು ನಿಮ್ಮ ವಿತರಕ ಅಂಚೆ ಪಟ್ಟಿಯಲ್ಲಿ ಹಾಕಿ, ಎರಡು ದೊಡ್ಡ ಬಾಕ್ಸ್ ಗಳಲ್ಲಿ ತುಂಬಿ ಬೈಬಲ್ ಗಳನ್ನು ಮತ್ತು ಸಾಹಿತ್ಯವನ್ನು ನಮಗೆ ಆದಷ್ಟು ಬೇಗ ಕಳುಹಿಸಿ. ನಿಮ್ಮ ಅವಸರದ ಉತ್ತರವನ್ನು ನಾನು ಕಾಯುತ್ತಿದ್ದೇನೆ. ಬಹಳ ಧನ್ಯವಾದಗಳು.

ಕ್ರಿಶ್ಚಿಯನ್ ಪ್ರೀತಿಯೊಂದಿಗೆ,
ಜೋಸೆಫ್ ಅಕಿನ್, ಆಂಡೊ ಸ್ಟೇಟ್, ನೈಜೀರಿಯ



## ಸಂಪೂರ್ಣ ವಿಶ್ವದಲ್ಲಿ ಅತ್ಯಂತ ಪ್ರಭಾವಿ ಸ್ಥಾನ ಟೋನಿ ಅಲಾಮೊ ಅವರಿಂದ

*(ಪುಟ 5 ರಿಂದ ಮುಂದುವರಿದಿದೆ)*

ನೀವು ನಿಮ್ಮ ಬದುಕನ್ನು ಬದುಕುತ್ತಿರುವ ರೀತಿಯನ್ನು ಮುಂದುವರಿಸಬೇಕೆಂಬುದರ ಬಗ್ಗೆ ನೀವು ಖಚಿತವಾಗಿದ್ದೀರೇ? ನೆನಪಿಡಿ, ನ್ಯಾಯವಿಚಾರಣೆಯ ದಿನ ಒಂದಿದೆ, ಮತ್ತು ನಿಮಗಾಗಿ ಪರಲೋಕ ಅಥವಾ ನರಕ ಸಿಗಲಿದೆ. ನಿಮ್ಮ ಆತ್ಮವನ್ನು ಮಾರಾಟ ಮಾಡುವಷ್ಟು ಬೆಲೆಬಾಳುವ ವಸ್ತು ಈ ಬದುಕಿನಲ್ಲಿದೆಯೆ? ಮಾದಕ ದ್ರವ್ಯಗಳು ಅಷ್ಟು ಮುಖ್ಯವೆ – ಅವುಗಳಿಗಾಗಿ ನೀವು ನಿರಂತರತೆಯನ್ನು ನರಕದಲ್ಲಿ ಕಳೆಯುವಷ್ಟು? ಅಥವಾ ಇಬ್ಬರನ್ನು ಅಶ್ಲೀಲ ಚಿತ್ರಗಳಲ್ಲಿ ಅಥವಾ ಟಿವಿಯಲ್ಲಿ ಒಬ್ಬರಿಗೊಬ್ಬರು ಏಡ್ಸ್ ಕೊಡುವುದನ್ನು ನೋಡುವುದಕ್ಕಾಗಿ ನಿಮ್ಮ ಆತ್ಮವನ್ನು ಮಾರಾಟ ಮಾಡುವಷ್ಟು ಅದು ನಿಮಗೆ ಮುಖ್ಯವೆ? ಹಣ, ಅಥವಾ ಕ್ರೀಡೆ, ಅಥವಾ ಮದ್ಯ, ಅಥವಾ ಯಾವುದೇ ರೀತಿಯ ಸ್ವಸುಖದ ಮೂಲಕ ನಿಮ್ಮನ್ನು ನೀವೇ ಸಂತೋಷಪಡಿಸುವುದು ನೀವು ನಿರಂತರತೆಯನ್ನು ನರಕದಲ್ಲಿ ಕಳೆದು, ನಂತರ ಬೆಂಕಿಯ ಕೆರೆಯಲ್ಲಿ ದೂಡಲ್ಪಡುವಷ್ಟು ಮುಖ್ಯವೆ? ನನಗೆ ಹಾಗೆ ಅನಿಸುವುದಿಲ್ಲ! ಪ್ರಭುವಿನೊಂದಿಗೆ – ಪಿಶಾಚಿಯೊಂದಿಗಲ್ಲ, ಪ್ರಭುವಿನೊಂದಿಗೆ, ಒಪ್ಪಂದ ಮಾಡಿಕೊಂಡು ನಿಮ್ಮ ಆತ್ಮವನ್ನು ಕಾಪಾಡಲು ನೀವು ಅಂತಿಮ ನಿರ್ಧಾರವನ್ನು ಏಕೆ ತೆಗೆದುಕೊಳ್ಳಬಾರದು? ಆತ ನಿಮ್ಮ ಆತ್ಮವನ್ನು ಪ್ರವೇಶಿಸಲಿ, ಮತ್ತು ನೀವು ಆತನನ್ನು ಪ್ರವೇಶಿಸಿ. ಹೀಗೆ ಮಾಡುವುದರಿಂದ ಶಾಶ್ವತ ಪ್ರತಿಫಲ ಏನೆಂಬುದನ್ನು ನೀವು ನೋಡಬಹುದಾದರೆ, ಪರಲೋಕದ ಆನಂದ ಸಾಮ್ರಾಜ್ಯವನ್ನು ಪ್ರವೇಶಿಸಲು ನೀವು ಅನುಭವಿಸಬಹುದಾದವುಗಳ ಬಗ್ಗೆ ನೀವು ಎಂದೂ ಗೊಣಗಲಾರಿರಿ ಅಥವಾ ದೂರಲಾರಿರಿ. ಇನ್ನೊಂದು ನಿಮಿಷ ಕಾಯಬೇಡಿ. ಈ ಪ್ರಾರ್ಥನೆಯನ್ನು ಹೇಳಿ ಶಾಶ್ವತ ಆಶೀರ್ವಾದವನ್ನು ಪಡೆಯಿರಿ,

**ನನ್ನ ಪ್ರಭುವೇ ಮತ್ತು ನನ್ನ ದೇವರೇ, ಪಾಪಿಯಾದ ನನ್ನ ಮೇಲೆ ಕರುಣೆ ತೋರಿ.[17] ಯೇಸು ಕ್ರಿಸ್ತರು ಜೀವಸ್ವರೂಪನಾದ ದೇವರ ಮಗನು ಎಂದು ನಾನು ನಂಬಿದ್ದೇನೆ.[18] ನನ್ನ ಹಿಂದಿನ ಎಲ್ಲಾ ಪಾಪಗಳನ್ನು ಕ್ಷಮಿಸುವುದಕ್ಕಾಗಿ ಆತ ಶಿಲುಬೆಯಲ್ಲಿ ಮರಣ ಹೊಂದಿದನು ಮತ್ತು ತನ್ನ ಅಮೂಲ್ಯ ರಕ್ತವನ್ನು ಸುರಿಸಿದನು ಎಂದು ನಾನು ನಂಬಿದ್ದೇನೆ.[19] ದೇವರು ಪವಿತ್ರಾತ್ಮನ ಶಕ್ತಿಯಿಂದ ಯೇಸುವನ್ನು ಸತ್ತವರಿಂದ ಪುನರುತ್ಥಾನಗೊಳಿಸಿದರು,[20] ಮತ್ತು ಈ ಗಳಿಗೆಯಲ್ಲಿ ನನ್ನ ಪಾಪನಿವೇದನೆಯನ್ನು ಮತ್ತು ಈ ಪ್ರಾರ್ಥನೆಯನ್ನು ಕೇಳುತ್ತಾ ಆತ ದೇವರ ಬಲಗಡೆಯಲ್ಲಿ ಕುಳಿತಿದ್ದಾನೆ ಎಂದು ನಾನು ನಂಬಿದ್ದೇನೆ.[21] ಪ್ರಭು ಯೇಸುವೇ, ನಾನು ನನ್ನ ಹೃದಯದ ಬಾಗಿಲನ್ನು ತೆರೆದು ನಿಮ್ಮನ್ನು ನನ್ನ ಹೃದಯದೊಳಗೆ ಆಮಂತ್ರಿಸುತ್ತೇನೆ.[22] ಕಾಲ್ವಾರಿಯಲ್ಲಿ ಶಿಲುಬೆಯ ಮೇಲೆ ನನ್ನ ಜಾಗದಲ್ಲಿ ನೀವು ಸುರಿಸಿದ ಅಮೂಲ್ಯ ರಕ್ತದಲ್ಲಿ ನನ್ನ ಎಲ್ಲಾ ಹೊಲಸು ಪಾಪಗಳನ್ನು ತೊಳೆದುಬಿಡಿ.[23] ನೀವು ನನ್ನನ್ನು ತಿರಸ್ಕರಿಸುವುದಿಲ್ಲ, ಪ್ರಭು ಯೇಸುವೇ; ನೀವು ನನ್ನ ಪಾಪಗಳನ್ನು ಕ್ಷಮಿಸುವಿರಿ ಮತ್ತು ನನ್ನ ಆತ್ಮವನ್ನು ರಕ್ಷಿಸುವಿರಿ. ನನಗೆ ಗೊತ್ತು ಏಕೆಂದರೆ ನಿಮ್ಮ ಪದವಾದ ಬೈಬಲ್ ಹೀಗೆಂದು ಹೇಳುತ್ತದೆ.[24] ನೀವು ಯಾರನ್ನೂ ತಿರಸ್ಕರಿಸುವುದಿಲ್ಲ ಎಂದು ನಿಮ್ಮ ಪದ ಹೇಳುತ್ತದೆ, ಮತ್ತು ಅದರಲ್ಲಿ ನಾನೂ ಸೇರಿದ್ದೇನೆ.[25] ಆದ್ದರಿಂದ ನೀವು ನನ್ನ ಮಾತು ಕೇಳಿಸಿಕೊಂಡಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನೀವು ನನಗೆ ಉತ್ತರಿಸಿದ್ದೀರಿ ಎಂದು ನನಗೆ ತಿಳಿದಿದೆ, ಮತ್ತು ನಾನು ರಕ್ಷಣೆ ಹೊಂದಿದ್ದೇನೆ ಎಂದು ನನಗೆ ತಿಳಿದಿದೆ.[26] ನನ್ನ ಆತ್ಮವನ್ನು ರಕ್ಷಣೆ ಮಾಡಿದ್ದಕ್ಕಾಗಿ, ಪ್ರಭು ಯೇಸುವೇ, ನಾನು ನಿಮಗೆ ಕೃತಜ್ಞನು, ಮತ್ತು ನೀವು ಆದೇಶಿಸಿದಂತೆ ನಡೆದುಕೊಂಡು ಇನ್ನು ಮುಂದೆ ಪಾಪ ಮಾಡದೆ ನಾನು ನನ್ನ ಕೃತಜ್ಞತೆಯನ್ನು ತೋರಿಸುತ್ತೇನೆ.[27]**

ರಕ್ಷಣೆಯ ನಂತರ, ಯೇಸುವು ತಂದೆಯ, ಮಗನ, ಮತ್ತು ಪವಿತ್ರಾತ್ಮದ ಹೆಸರಿನಲ್ಲಿ, ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿ, ದೀಕ್ಷಾಸ್ನಾನ ಮಾಡಿದರೆಂದು ಹೇಳಲಾಗುತ್ತದೆ.[28] ಬೈಬಲ್ ಸೊಸೈಟಿ ಆಫ್ ಇಂಡಿಯಾದ "ಸತ್ಯವೇದವು" [ಇಂಗ್ಲಿಷ್ ನ ಕೆಜೆವಿ] ಬೈಬಲ್ ಅನ್ನು ಓದಿ, ಮತ್ತು ನೀವು ಸಾಯುವ ತನಕ ಅದು ಹೇಳಿದ್ದನ್ನು ಮಾಡಿ.[29]

ರಕ್ಷಣೆಯ ಬಗ್ಗೆ ನೀವು ಇತರರಿಗೆ ತಿಳಿಸಬೇಕೆಂದು ಪ್ರಭು ಬಯಸುತ್ತಾರೆ (ಮಾರ್ಕ 16:15). ನೀವು ಪ್ಯಾಸ್ಟರ್ ಟೋನಿ ಅಲಾಮೊ ಅವರ ಸುವಾರ್ತೆಯ ಸಾಹಿತ್ಯದ ವಿತರಕರಾಗಬಹುದು. ನಾವು ನಿಮಗೆ ಸಾಹಿತ್ಯವನ್ನು ಯಾವುದೇ ಶುಲ್ಕವಿಲ್ಲದೆ ಕಳುಹಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಮಗೆ ಕರೆಮಾಡಿ ಅಥವಾ ಇಮೇಲ್ ಮಾಡಿ. ಈ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳಿ.

ನಾವು ಪಾಸ್ಟರ್ ಅಲಾಮೊ ಅವರ ಸಾಹಿತ್ಯವನ್ನು ಅನೇಕ ಭಾಷೆಗಳಲ್ಲಿ ಮುದ್ರಿಸುತ್ತೇವೆ, ಮತ್ತು ಪ್ರಪಂಚದೆಲ್ಲೆಡೆ ಕಳುಹಿಸುತ್ತೇವೆ. ನಾವು ಮುದ್ರಣ ಕಾಗದ ಮತ್ತು ಶಿಪ್ಪಿಂಗ್ ಗಾಗಿ ಅನೇಕ ಮಿಲಿಯ ಡಾಲರುಗಳನ್ನುವ್ಯಯಿಸುತ್ತೇವೆ, ಹಾಗಾಗಿ ನಮಗೆ ನಿಮ್ಮ ಪ್ರಾರ್ಥನೆ ಮತ್ತು ಆರ್ಥಿಕ ಸಹಾಯದ ಅಗತ್ಯವಿದೆ.

ಜಗತ್ತು ರಕ್ಷಣೆ ಪಡೆಯಬೇಕೆಂದು ನೀವು ಬಯಸಿದರೆ ಯೇಸು ಆದೇಶಿಸುವಂತೆ, ದೇವರಿಂದ ಆತನ ದಶಾಂಶಗಳನ್ನು ಮತ್ತು ಕೊಡುಗೆಗಳನ್ನು ಕದ್ದುಕೊಳ್ಳಬೇಡಿ. ದೇವರು ಹೀಗೆ ಹೇಳಿದರು, "ನರಮನುಷ್ಯನು ದೇವರಿಂದ ಕದ್ದುಕೊಳ್ಳಬಹುದೇ? ನೀವಾದರೋ ನನ್ನಿಂದ ಕದ್ದುಕೊಳ್ಳುತ್ತಿದ್ದೀರಿ. ನಿನ್ನಿಂದ ಏನು ಕದ್ದುಕೊಂಡಿದ್ದೀರಿ ಎಂದು ಕೇಳುತ್ತೀರೋ? ದಶಾಂಶ ನನಗೋಸ್ಕರ ಪ್ರತ್ಯೇಕಿಸಬೇಕಾದ ಪದಾರ್ಥ, ಇವುಗಳನ್ನೇ. ನೀವು ಅಂದರೆ ಈ ಜನಾಂಗದವರೆಲ್ಲಾ [ಮತ್ತು ಈ ಸಂಪೂರ್ಣ ಜಗತ್ತು] ನನ್ನಿಂದ ಕದ್ದುಕೊಳ್ಳುವವರಾದ ಕಾರಣ ಶಾಪಗ್ರಸ್ತರಾಗಿದ್ದೀರಿ. ನನ್ನ ಆಲಯವು [ರಕ್ಷಣೆ ಹೊಂದಿರುವ ಆತ್ಮಗಳು] ಆಹಾರಶೂನ್ಯವಾಗದಂತೆ [ಆಧ್ಯಾತ್ಮಿಕ ಆಹಾರ] ನೀವು ದಶಾಂಶವನ್ನು [ದಶಾಂಶ ಎಂದರೆ ನಿಮ್ಮ ಒಟ್ಟು ಆದಾಯದ 10%] ಯಾವತ್ತೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ. ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು, ಅದು ನಿಮ್ಮ ಭೂಮಿಯ ಫಲವನ್ನು ನಾಶ ಮಾಡದು; ನಿಮ್ಮ ದ್ರಾಕ್ಷಿಯ ಹಣ್ಣು ತೋಟದಲ್ಲಿ ಉದುರಿಹೋಗದಂತಾಗುವುದು; ಇದು ಸೇನಾಧೀಶ್ವರ ಯೆಹೋವನ ನುಡಿ. ಆಗ ಸಕಲ ಜನಾಂಗಗಳವರು ನಿಮ್ಮನ್ನು ಧನ್ಯರೆಂದು ಕೊಂಡಾಡುವರು; ನಿಮ್ಮ ದೇಶವು ಆನಂದವಾಗಿರುವದು; ಇದು ಸೇನಾಧೀಶ್ವರ ಯೆಹೋವನ ನುಡಿ" (ಮಲಾಕಿಯ 3:8-12).

---

**17** ಕೀರ್ತನೆಗಳು 51:5, ರೋಮಾಪುರದವರಿಗೆ 3:10-12, 23 **18** ಮತ್ತಾಯ 26:63-64, 27:54, ಲೂಕ 1:30-33, ಯೋಹಾನ 9:35-37, ರೋಮಾಪುರದವರಿಗೆ 1:3-4 **19** ಅಪೋಸ್ತಲರ ಕೃತ್ಯಗಳು 4:12, 20:28, ರೋಮಾಪುರದವರಿಗೆ 3:25, 1 ಯೋಹಾನ 1:7, ಪ್ರಕಟನೆ 5:9 **20** ಕೀರ್ತನೆಗಳು 16:9-10, ಮತ್ತಾಯ 28:5-7, ಮಾರ್ಕ 16:9, 12, 14, ಯೋಹಾನ 2:19, 21, 10:17-18, 11:25, ಅಪೋಸ್ತಲರ ಕೃತ್ಯಗಳು 2:24, 3:15, ರೋಮಾಪುರದವರಿಗೆ 8:11, 1 ಕೊರಿಂಥದವರಿಗೆ 15:3-7 **21** ಲೂಕ 22:69, ಅಪೋಸ್ತಲರ ಕೃತ್ಯಗಳು 2:25-36, ಇಬ್ರಿಯರಿಗೆ 10:12-13 **22** 1 ಕೊರಿಂಥದವರಿಗೆ 3:16, ಪ್ರಕಟನೆ 3:20 **23** ಎಫೆಸದವರಿಗೆ 2:13-22, ಇಬ್ರಿಯರಿಗೆ 9:22, 13:12, 20-21, 1 ಯೋಹಾನ 1:7, ಪ್ರಕಟನೆ 1:5, 7:14 **24** ಮತ್ತಾಯ 26:28, ಅಪೋಸ್ತಲರ ಕೃತ್ಯಗಳು 2:21, 4:12, ಎಫೆಸದವರಿಗೆ 1:7, ಕೊಲೊಸ್ಸೆಯವರಿಗೆ 1:14 **25** ಮತ್ತಾಯ 21:22, ಯೋಹಾನ 6:35, 37-40, ರೋಮಾಪುರದವರಿಗೆ 10:13 **26** ಇಬ್ರಿಯರಿಗೆ 11:6 **27** ಯೋಹಾನ 5:14, 8:11, ರೋಮಾಪುರದವರಿಗೆ 6:4, 1 ಕೊರಿಂಥದವರಿಗೆ 15:10, ಪ್ರಕಟನೆ 7:14, 22:14 **28** ಮತ್ತಾಯ 28:18-20, ಯೋಹಾನ 3:5, ಅಪೋಸ್ತಲರ ಕೃತ್ಯಗಳು 2:38, 19:3-5 **29** ಧರ್ಮೋಪದೇಶಕಾಂಡ 4:29, 13:4, 26:16, ಯೆಹೋಶುವ 1:8, 22:5, 2 ತಿಮೊಥೆಯನಿಗೆ 2:15, 3:14-17, ಯಾಕೋಬನು 1:22-25, ಪ್ರಕಟನೆ 3:18

---

ಹೆಚ್ಚಿನ ಮಾಹಿತಿಗಾಗಿ ಅಥವಾ ಆಸಕ್ತಿಕರವಾಗಿರಬಹುದಾದ ಇತರ ವಿಷಯಗಳ ಬಗ್ಗೆ ಸಾಹಿತ್ಯಕ್ಕಾಗಿ ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

**Tony Alamo, World Pastor, Tony Alamo Christian Ministries Worldwide • P.O. Box 2948, Hollywood, CA 90078**
**24 ಗಂಟೆಗಳ ಪ್ರಾರ್ಥನೆಯ ಸಹಾಯವಾಣಿ: +1 (661) 252-5686 • Fax +1 (661) 252-4362**
**www.alamoministries.com • taoffice@alamoministries.com**

ತಮ್ಮ ಸಂಪೂರ್ಣ ಹೃದಯ, ಆತ್ಮ, ಮನಸ್ಸು, ಮತ್ತು ಬಲದಿಂದ ಪ್ರಭುವಿನ ಸೇವೆ ಮಾಡಲು ನಿಜವಾಗಿಯೂ ಬಯಸುವ ನಮ್ಮ ಎಲ್ಲಾ ಯು.ಎಸ್. ತಾಣಗಳಲ್ಲಿರುವವರಿಗೆ ಬದುಕಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳೊಂದಿಗೆ ವಾಸಿಸಲು ಟೋನಿ ಅಲಾಮೊ ಕ್ರಿಶ್ಚಿಯನ್ ಮಿನಿಸ್ಟ್ರೀಸ್ ವರ್ಲ್ಡ್‌ವೈಡ್ ಸ್ಥಳ ಒದಗಿಸುತ್ತದೆ.

**ನ್ಯೂ ಯಾರ್ಕ್ ನಗರದಲ್ಲಿ ಪ್ರತಿ ಮಂಗಳವಾರ ಸಂಜೆ 8 ಗಂಟೆಗೆ ಮತ್ತು ಇತರ ಸ್ಥಳಗಳಲ್ಲಿ ರಾತ್ರಿ ವೇಳೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಸಂಖ್ಯೆಗೆ ಕರೆ ಮಾಡಿ. (908) 937-5723.**

**333ಕ್ಕೂ ಹೆಚ್ಚಿನ ಭವಿಷ್ಯವಾಣಿಗಳಲ್ಲಿ ಹಳೆ ಒಡಂಬಡಿಕೆಯಿಂದ ಕ್ರಿಸ್ತರನ್ನು ತೋರಿಸುವ ಪ್ಯಾಸ್ಟರ್ ಅಲಾಮೊ ಅವರ, ದ ಮೆಸ್ಸಾಯ, ಪುಸ್ತಕವನ್ನು ಕೇಳಿ ಪಡೆಯಿರಿ.**

*ಲಾಸ್ ಏಂಜಲಿಸ್ ಚರ್ಚ್ ಪ್ರದೇಶ:* 13136 *ಸಿಯೆರಾ ಹೈವೇ, ಸಾಂಟಾ ಕ್ಲಾರಿಟಾ, ಕ್ಯಾಲಿಫೋರ್ನಿಯಾ* 91390 (661) 251-9424 *ದಲ್ಲಿ, ಪ್ರತಿ ಸಂಜೆ* 8 *ಗಂಟೆಗೆ ಮತ್ತು ಭಾನುವಾರದಂದು ಮಧ್ಯಾಹ್ನ* 3 *ಗಂಟೆಗೆ ಮತ್ತು ರಾತ್ರಿ* 8 *ಗಂಟೆಗೆ ಪ್ರಾರ್ಥನಾ ಸಭೆಯನ್ನು ನಡೆಸಲಾಗುವುದು.*

*ಉಚಿತ ವಾಹನ ಸೇವೆಯನ್ನು ಹಾಲಿವುಡ್ ಬೂಲೆವಾರ್ಡ್ ಮತ್ತು ಹೈಲ್ಯಾಂಡ್ ಅವೆನ್ಯೂ, ಹಾಲಿವುಡ್, ಕ್ಯಾಲಿಫೋರ್ನಿಯಾದ ಮೂಲೆಯಿಂದ ಪ್ರತಿ ಸಂಜೆ* 6.30 *ಕ್ಕೆ, ಭಾನುವಾರಗಳಂದು ಮಧ್ಯಾಹ್ನ* 1.30 *ಕ್ಕೆ ಮತ್ತು ಸಂಜೆ* 6.30 *ಕ್ಕೆ ಒದಗಿಸಲಾಗುವುದು.*

*ಪ್ರತಿಯೊಂದು ಪ್ರಾರ್ಥನಾ ಸಭೆಯ ನಂತರ ಊಟದ ವ್ಯವಸ್ಥೆ ಮಾಡಲಾಗುವುದು.*

**ಈ ಸಾಹಿತ್ಯವು ರಕ್ಷಣೆಯ ನಿಜವಾದ ಯೋಜನೆಯನ್ನು ಹೊಂದಿದೆ (ಅಪೋಸ್ತಲರ ಕೃತ್ಯಗಳು 4:12).**

**ಇದನ್ನು ಬಿಸಾಡಬೇಡಿ, ಬೇರೆ ಯಾರಿಗಾದರೂ ಕೊಡಿ.**

**ಇತರ ದೇಶಗಳಲ್ಲಿರುವವರೇ, ಈ ಸಾಹಿತ್ಯವನ್ನು ನಿಮ್ಮ ಸ್ಥಳೀಯ ಭಾಷೆಗೆ ಭಾಷಾಂತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.**

**ನೀವು ಮರುಮುದ್ರಣ ಮಾಡುವುದೇ ಆದಲ್ಲಿ, ದಯವಿಟ್ಟು ಈ ಕೃತಿಸ್ವಾಮ್ಯ ಮತ್ತು ನೋಂದಣಿಯನ್ನು ಸೇರಿಸಿ:**

© Copyright June 2014, 2015 All rights reserved World Pastor Tony Alamo ® Registered June 2014, 2015

KANNADA—VOLUME 19700—*THE MOST POWERFUL POSITION IN THE WHOLE UNIVERSE*